Funding: Tattva Heritage Foundation,Kolkata. Digitization: eGangotri.

B6

ಜೈನ ಓರಿಯಂಟಲ್ ಸಂಶೋಧನಾ ಸಂಸ್ಥೆ
ಜಿನವಾಣಿ ಗ್ರಂಥಮಾಲಾ ಪುಷ್ಪ ೬



ಮಹಾತ್ಯಾಗಿ ೧೦೦೮ ಭಗವಾನ್ ಬಾಹುಬಲಿ ಚರಿತೆ

ಲೇಖಕರು ಮತ್ತು ಸಂಪಾದಕರು
ಶ್ರೀಮತಿ ಪಿ. ಸರೋಜಿನಿಕುಮಾರ್, ಮೈಸೂರು

ಪ್ರಕಾಶಕರು
ಚಂದ್ರಪ್ರಭ ಟ್ರಸ್ಟ್ (ರಿ.)
67, ಬನುಮಯ್ಯ ರಸ್ತೆ ,ಸೂರು–24.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅಭಿನಂದನೆಗಳು

ಧರ್ಮ ಬಾಂಧವರೆ,

1981ರ ಶ್ರೀ ಬಾಹುಬಲಿ 84ನೇ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಜಿನವಾಣಿ ವಿಶೇಷಾಂಕವನ್ನು ಪ್ರಕಟಿಸಿದ್ದೆವು. ಕಾಲದ ವೆತ್ಯಾಸದಿಂದ ಹೆಚ್ಚಿನ ರೀತಿ ಮಾಡಲು ಸಾಧ್ಯವಾಗದೆ ಈ 19–12–93ನೇ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಪ್ರಕಟಿಸಲು ಭಗವಾನ್ ಬಾಹುಬಲಿಯ ಜೀವನ ಚಿತ್ರವನ್ನು ಸಂಗ್ರಹಿಸಿ ಕೊಡಬೇಕೆಂದು ಶ್ರೀಮತಿ ಸರೋಜನಿಕುಮಾರ್‌ರವರಲ್ಲಿ ಕೇಳಲಾಗಿ ಅವರು ಭಗವಾನ್ ಜಿನಸೇನಾಚಾರ್ಯರ ಮಹಾಪುರಣದಿಂದ ಶ್ರೀ ಬಾಹುಬಲಿ ಚಿತ್ರವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಇವರ ಸಂಗ್ರಹ ಕಾರ್ಯವು ಸಮಯೋಚಿತವಾಗಿ ಮಹತ್ವಪೂರ್ಣ ವಿಷಯವನ್ನು ಕೊಟ್ಟಿದ್ದಾರೆ. ಇವರ ಲೇಖನವನ್ನು ಬಾಹುಬಲಿ ಚಿತ್ರದೊಡನೆ ಪ್ರಕಟಿಸಿದ್ದೇವೆ. ಇದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಮಾಡಲು ಸಾಧ್ಯವಾಗಲಿಲ್ಲ. ಈ ಗ್ರಂಥವನ್ನು ಸುಂದರವಾಗಿ ಸಕಾಲವಲ್ಲಿ ಮುದ್ರಿಸಿಕೊಟ್ಟ ಮಂಜುನಾಥ ಪ್ರಿಂಟರ್ಸ್ ಮಾಲೀಕರಿಗೂ ಮತ್ತು ಲೇಖನವನ್ನು ಸಂಗ್ರಹಿಸಿಕೊಟ್ಟ ಶ್ರೀಮತಿ ಸರೋಜನಿಕುಮಾರ್ ರವರಿಗೂ ನಮ್ಮ ಅಭಿನಂದನೆಗಳು.

ಎಂ. ಪಿ. ರವೀಂದ್ರನಾಥ್
ಪ್ರೆಸಿಡೆಂಟ್
ಚಂದ್ರಪ್ರಭ ಟ್ರಸ್ಟ್
ಮೈಸೂರು
15–12–93

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕೃತಜ್ಞತೆ

ಸದ್ಭವ್ಯರೆ, ಈ ಕಿರುಹೊತ್ತಿಗೆ ನನ್ನ ಮೊದಲ ಸಂಗ್ರಹ ಎಲ್ಲರಿಗೂ ಸದುಪಯೋಗವಾಗುವುದೆಂದು ನಂಬಿದ್ದೇನೆ. ಹಂಸವು ನೀರನ್ನು ಬಿಟ್ಟು ಹಾಲನ್ನು ಕುಡಿಯುವಂತೆ ದೋಷ ದೃಷ್ಟಿಯನ್ನು ಬಿಟ್ಟು ಗುಣ ದೃಷ್ಟಿಯಿಂದ ಓದುವಿರೆಂಬ ಭರವಸೆ ನನಗಿದೆ. ಇದೇ 1993ರ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕದ ಸಮಯದಲ್ಲಿ ನಾನು, ಧರ್ಮದ ಅಳಿಲು ಸೇವೆಯನ್ನು ಮಾಡಲು ಅವಕಾಶ ಮಾಡಿಕೊಟ್ಟಂಥ "ಚಂದ್ರಪ್ರಭ ಟ್ರಸ್ಟ್" ನ ಸಮಿತಿಯವರಿಗೆ ನಾನು ಅತ್ಯಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಜಯ ಜಿನೇಂದ್ರ

ತಾ॥ 15, ಡಿಸೆಂಬರ್ 1993
ಮೈಸೂರು

ಪಿ. ಸರೋಜಿನಿ ಕುಮಾರ್
"ಸಮ್ಯಗ್ ದರ್ಶನ್"
1468, ತ್ಯಾಗರಾಜ ರಸ್ತೆ, 3ನೇ ಕ್ರಾಸ್
ಮೈಸೂರು-24

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

|| ವೀತರಾಗಾಯ ನಮಃ ||

ಜಂಬೂದ್ವೀಪದ ಭರತ ಕ್ಷೇತ್ರದಲ್ಲಿ ಅವಸರ್ಪಿಣಿಯ ಮೊದಲ ವಿಭಾಗದ "ಸುಷಮಾ ಸುಷಮಾ" ಕಾಲವು ನಾಲ್ಕು ಕೋಟಾ ಕೋಟಿ ಸಾಗರೋಪಮ ಕಾಲದವರೆಗೆ ಕಳೆದನಂತರ, ಎರಡನೆಯ ಭಾಗವಾದ "ಸುಷಮಾ" ಕಾಲವು ಬಂದು, ಮೂರು ಕೋಟಾ ಕೋಟಿ ಕಾಲವು ಕಳೆದ ವೇಳೆಗೆ, ಜಘನ್ಯ ಭೋಗ ಭೂಮಿಯ ಸ್ಥಿತಿ ಕಾಣಿಸಿತು. ನಂತರ ಮೂರನೆಯದಾದ "ಸುಷಮಾ ದುಃಷಮಾ" ಕಾಲವು ಪ್ರಾರಂಭವಾಯಿತು ಈ ಕಾಲವೂ ಸಹ ಮುಗಿಯುತ್ತಾ ಎರಡು ಕೋಟಾ ಕೋಟಿ ಸಾಗರೋಪಮದ ಒಂದು ಪಲ್ಯೋಪಮದ ಎಂಟನೆ ಒಂದು ಭಾಗ ಉಳಿದಾಗ, ಕಲ್ಪವೃಕ್ಷಗಳು ಸೊರಗಿದವು. ಜ್ಯೋತಿರಂಗ ವೃಕ್ಷಗಳು ಮಂಕಾದವು ಆಷಾಢಶುದ್ಧ ಪೌರ್ಣಮಿ ದಿನ ಸೂರ್ಯ ಚಂದ್ರರುಮೂಡಿದರು, ಗ್ರಹತಾರೆಗಳು ಮಿನುಗಿದವು. ಆಗ ಪ್ರಥಮ ಮನುವಾದ ಪ್ರತಿಶ್ರುತಿ ರಾರಾಜಿಸಿದನು. ಇವನು ಪ್ರಜೆಗಳಿಗೆ ಹೊಸ ಪರಿಸರವನ್ನು ವಿವರಿಸಿ ಅಭಯವನಿತ್ತನು. ಹೀಗೆ ಮುಂದೆ ಬಂದಂಥ, ಎರಡನೆಯ ಸನ್ಮತಿ, ಮೂರನೇ ಕ್ಷೇಮಂಕರ, ನಾಲ್ಕನೆ ಕ್ಷೇಮಂಧರ, ಐದನೆ ಸೀಮಂಕರ, ಆರನೆ ಸೀಮಂಧರ, ಏಳನೆ ವಿಮಲವಾಹನ, ಎಂಟನೆ ಚಕ್ಷುಷ್ಮ, ಒಂಭತ್ತನೆ ಯಶಸ್ವಾನ್, ಹತ್ತನೇ ಅಭಿಚಂದ್ರ, ಹನ್ನೊಂದನೆ ಚಂದ್ರಾಭ, ಹನ್ನೆರಡನೆ ಮರುದೇವ, ಹದಿಮೂರನೆ ಪ್ರಸೇನಜಿತ್, ಹದಿನಾಲ್ಕನೆ ಮನು ನಾಭಿರಾಜ. ಇವನು ಪ್ರಜೆಗಳಿಗೆ, ಹುಟ್ಟಿದ ಮಕ್ಕಳ ಹೊಕ್ಕಳು ಬಳ್ಳಿಯನ್ನು ಕತ್ತರಿಸುವುದನ್ನು ಹೇಳಿಕೊಟ್ಟವನಾದ್ದರಿಂದ ನಾಭಿರಾಜನಾದನು.

ಯುಗಶ್ರೇಷ್ಠನಾದ ಈ ನಾಭಿರಾಜ ಮನುವು ತೇಜಸ್ವಿಯಾಗಿದ್ದು, ರಾಜ ಕುಲಕ್ಕೆ ಗುಣಪೂರ್ಣನಾಗಿ ರಾರಾಜಿಸಿದನು. ಇವನಿಗೆ, ಒಡೇವಿಯು ರೂಪು ಲಾವಣ್ಯ ಕಾಂತಿಸಂಪತ್ತು ಬುದ್ಧಿ ತೇಜಸ್ಸನ್ನು ಹೊಂದಿರುವಂತಹ ಮರುದೇವಿ ಪತ್ನಿಯಾಗಿದ್ದಳು. ಸ್ತ್ರೀಯರ ಎಲ್ಲಾ ಸಾಮುದ್ರಿಕ ಲಕ್ಷಣವನ್ನೂ ಹೊಂದಿದ್ದಳು. ಈ ಪುಣ್ಯ ದಂಪತಿಗಳಿಗಾಗಿ ದೇವೇಂದ್ರನೇ ಬಂದು ನೂತನ ಪಟ್ಟಣವನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಿರ್ಮಿಸಿದನು. ಇವನ ಅಪ್ಪಣೆಯಂತೆ, ಕೂಡಲೇ ದೇವತೆಗಳು ಅಮರಾವತಿ ಯನ್ನು ನಾಚಿಸುವಂತಿದೆಯೊ ಎಂಬಂತಿರುವ ಅಯೋಧ್ಯೆನಗರವನ್ನು ರಚಿಸಿದರು ಈ ನಗರವು ಸುಕೋಶಲ, ವಿನೀತಾ ಮೊದಲಾದ ಹೆಸರುಗಳಲ್ಲಿ ಲೋಕವಿಖ್ಯಾತ ವಾಯ್ತು. ಅಯೋಧ್ಯೆಯ ಮಧ್ಯದಲ್ಲಿದ್ದ ರಾಜಭವನದಲ್ಲಿ ದಂಪತಿಗಳು ಸುಖ ವಾಗಿರಲು, ದೇವೇಂದ್ರನು ಈ ದಂಪತಿಗಳು ಸರ್ವಜ್ಞನಾದ ಆದಿತೀರ್ಥಂಕರನನ್ನು ಪಡೆಯುವರೆಂದು ವೈಭವದಿಂದ ಅವರಿಗೆ ಅಭಿಷೇಕಮಾಡಿ ಪೂಜಿಸಿದನು. ಮುಂದೆ ಶ್ರೀ ಮರುದೇವಿಯು ಗರ್ಭವತಿಯಾಗಲು ದೇವೇಂದ್ರನು ಗರ್ಭಾವತರಣಕಲ್ಯಾಣ ವನ್ನು ಮಾಡಿದನು. ಚೈತ್ರಬಹುಳ ನವಮಿಯಂದು ತ್ರಿಕಾಲಜ್ಞಾನಿಯೂ ಗುಣನಿಧಿಯೂ, ಪ್ರಭಾಪುಂಜನೂ ಆದ ಜಿನಶಿಶುವು ಉತ್ತರಾಷಾಡ ನಕ್ಷತ್ರದಲ್ಲಿ ಸುಮುಹೂರ್ತದಲ್ಲಿ ಜನಿಸಲು, ಆಗಲೇ ದೇವತೆಗಳು ಬಂದು ಜಿನಶಿಶುವನು ಕೊಂಡೊಯ್ದು ಮೇರುಗಿರಿಗೆ ತಲುಪಿ ಅಲ್ಲಿಪಾಂಡುಕಶಾಲೆಯಲ್ಲಿ ಜನ್ಮಾಭಿಷೇಕ ಕಲ್ಯಾಣವನ್ನು ಮಾಡಿ ವೃಷಭನೆಂದು ನಾಮಕರಣ ಮಾಡಿ, ಅಯೋಧ್ಯೆಗೆ ಬಂದು ತಂದೆತಾಯಿಗಳಿಗೆ ಮಗುವನ್ನಿತ್ತು ಸಂತೋಷದಿಂದ ಸ್ವರ್ಗಕ್ಕೆ ಹೋದರು. ವೃಷಭದೇವನು ಬೆಳೆದಂತೆ ಜೊತೆಯಲ್ಲೆ ಸೌಂದರ್ಯವೂ 108 ಮಹಾ ಲಕ್ಷಣ ಗಳು ವೃದ್ಧಿಯಾದವು ಮತ್ತು ವಜ್ರಮಯವಾದ ಕೀಲುಗಳಿಂದ ಕೂಡಿದ ವಜ್ರ ವೃಷಭನಾರಾಚಸಂಹನವಾದ ಶರೀರವಾಗಿದ್ದು ಈತನ ದೇಹವು ಸಮಚತುರಸ್ರ ರಚನಾ ವಿನ್ಯಾಸದಿಂದ ಕಂಗೊಳಿಸುತ್ತಿತ್ತು. ಮಹಾ ಮೇರುಪರ್ವತದಲ್ಲಿ ಸೂರ್ಯ ಚಂದ್ರಾದಿ ಜ್ಯೋತಿರ್ಗಣಗಳು ಪ್ರತಿಬಿಂಬಿಸುವಂತೆ ಸ್ವಾಮಿಯ ದೇಹವು ಸಲ್ಲಕ್ಷಣ ಗಳಿಂದ ಶೋಭಿಸುತ್ತಿತ್ತು. ವೃಷಭದೇವನೂ ಸಹ ಮನುವಾಗಿದ್ದನು.

ನಾಭಿರಾಜನು ಸ್ವಾಮಿಯ ಯೌವನವನ್ನು ಕಂಡು, ಸುಶೀಲೆಯರೂ ಪತಿವ್ರತೆಯರೂ ಆದ ಕಚ್ಛಮಹಾಕಚ್ಛ ಸಹೋದರಿಯರಾದ ಯಶಸ್ವತಿ, ಸುನಂದೆ ಯರನ್ನು ತಂದು ವೃಷಭನಾಥನಿಗೆ ವಿವಾಹ ಮಹೋತ್ಸವವನ್ನು ಮಾಡಿದನು. ಆದಿನಾಥನಿಗೆ ಯಶಸ್ವತಿಯಲ್ಲಿ ಭರತನೇ ಮೊದಲಾದ ನೂರು ಮಂದಿ ಮಕ್ಕಳೂ ಬ್ರಾಹ್ಮಿ ಎಂಬ ಪುತ್ರಿಯೂ ಜನಿಸಿದರು.

ಭರತನು, ಹುಟ್ಟುವಾಗಲೆ ಧ್ರುವಯೋಗದಲ್ಲಿ, ಶುಭಲಗ್ನದ ಚಕ್ರವರ್ತಿಯ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಲಕ್ಷಣವುಳ್ಳವನಾಗಿದ್ದನು. ವೃಷಭತೀರ್ಥಂಕರನ ಸೌಂದರ್ಯದ ಇನ್ನೊಂದು ರೂಪೋ ಎನ್ನುವಂತೆ ಭರತನು ಹೊನ್ನಕಾಂತಿಯಿಂದ ಕ್ಷಾತ್ರ ತೇಜಸ್ಸಿನಿಂದ ಕಂಗೊಳಿಸುತ್ತಿದ್ದನು.

ಆದಿನಾಥನಿಗೆ ಸುನಂದೆಯಲ್ಲಿ ಭುಜಬಲ ಪರಾಕ್ರಮಿಯಾದ ಬಾಹುಬಲಿ ಎಂಬ ಪುತ್ರನೂ, ಸುಂದರಿ ಎಂಬ ಪುತ್ರಿಯೂ ಜನಿಸಿದರು. ಬಾಹುಬಲಿಯ ರೂಪು ಅಸದೃಶವಾದದ್ದು. ದುಂಬಿಗಳ ಸಮೂಹದಂತೆ ಶೋಭಿಸುವ ಬಾಹುಬಲಿಯ ಗುಂಗುರು ಕೂದಲು ಮನ್ಮಥನ ಕುಲಾವಿಯಂತೆ, ಉಂಗುರಗಳ ಸಮೂಹದಂತೆ ಕಂಗೊಳಿಸಿತು. ಬ್ರಹ್ಮನು ನಿರ್ಮಿಸಿದ ಪಟ್ಟದ ಮಣಿಯಾಗಿ, ಅಷ್ಟಮೀ ಚಂದ್ರನಂತೆ ಬಾಹುಬಲಿಯ ಹಣೆ ಶೋಭಿಸಿತು. ಚಕ್ರವಾಕಗಳು ಕಮಲದ ಬಳಿ ಕುಳಿತಂತೆ ಈತನ ಕರ್ಣಕುಂಡಲಗಳು ಮುಖಕ್ಕೆ ಶೋಭಿಸಿದುವು. ಮಂದಹಾಸದಿಂದ ಕೂಡಿದ ಈತನ ಮುಖವು ಲಕ್ಷ್ಮಿಯ ವಾಸಸ್ಥಾನವಾಗಿದ್ದಿತು. ಇವನ ಕಂಗಳು ನೈದಿಲೆಯೆಂತಿದ್ದವು. ಪಚ್ಚೆಯ ಪರ್ವತದಲ್ಲಿ, ಗಿರಿ ನದಿಗಳು ಹರಿಯುವಂತೆ ಈತನ ಎದೆಯಲ್ಲಿ "ವಿಜಯಚ್ಛಂದ"ವೆಂಬ ಮುಕ್ತಾಹಾರವು ಶೋಭಿಸ್ಸುತ್ತಿತ್ತು. ದ್ವೀಪದ ಸನಿಹದಲ್ಲಿ ಎರಡು ಸಣ್ಣ ಪರ್ವತಗಳಿರುವಂತೆ ಬಾಹುಬಲಿಯ ಎದೆಗೆ ಭುಜ ಶಿರಸ್ಸುಗಳು ಶೋಭೆಯನ್ನುಂಟು ಮಾಡುತ್ತಿದ್ದವು. ತೇಜಸ್ಸಿಗೆ ತೌರುಮನೆಯಾದ ಬಾಹುಬಲಿಯು, ಬಲಯುತವೂ, ನೀಳವೂ ಆದ ತೋಳುಗಳನ್ನು ಪಡೆದು ಬಾಹುಬಲಿಯಾದನು. ಸಾಹಸಿಯಾದ ಬಾಹುಬಲಿಯು ಮುಂದೆ ಪ್ರತಿಮಾ ಯೋಗದಲ್ಲಿ ಸುಸ್ಥಿರನಾಗಲು ಕಾರಣವಾಗುವ ಕಣಕಾಲುಗಳು ಅತಿಶಯವಾಗಿ ಕಾಣುತ್ತಿತ್ತು. ಉನ್ನತವಾದ ಚರಮ ಶರೀರ (ತದ್ಭವ ಮೋಕ್ಷಗಾಮಿ) ಧರಿಸಿರುವ ಬಾಹುಬಲಿಗೆ ಸಾಟಿ ಬಾಹುಬಲಿಯೇ ವಿನಹ ಬೇರಾರನ್ನೂ ಹೋಲಿಸಲು ಸಾಧ್ಯವಿರಲಿಲ್ಲ. ವೃಷಭಸ್ವಾಮಿ ಹಾಗೂ ಭರತೇಶ 500 ಬಿಲ್ಲು ಎತ್ತರವಿದ್ದರೆ ಪಚ್ಚೆವರ್ಣದ ಬಾಹುಬಲಿಯು 525 ಬಿಲ್ಲು ಎತ್ತರವಿದ್ದು ರೂಪು ಸಂಪತ್ತಿನಿಂದ ತೊಳಗುತ್ತಿದು ಆ ಕಾಲದ ಮನ್ಮಥನಾಗಿದ್ದನು. ಬಾಹುಬಲಿಯನ್ನು ಮನಸಿಜ, ಮನೋಭವ, ಮನ್ಮಥ, ಅಂಗಜ, ಮದನ, ಅನನ್ಯಜ ಮೊದಲಾದ ಹೆಸರುಗಳಿಂದ ಕೊಂಡಾಡುತ್ತಿದ್ದರು.

ಇವರೆಲ್ಲರಿಂದ ಸುತ್ತುವರೆಯಲ್ಪಟ್ಟಿದ್ದ ನಾಭಿರಾಜನ ಸಂತೋಷಕ್ಕೆ ಪಾರವೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇಲ್ಲವಾಗಿತ್ತು. ವೃಷಭನಾಥರು ಗಂಡುಮಕ್ಕಳಿಗೆ ಲೋಕೋಪಕಾರವಾದ ಸಮಸ್ತ ವಿದ್ಯೆಗಳನ್ನೂ, ಶಾಸ್ತ್ರಗಳನ್ನೂ ಕಲಿಸಿದರು ಮತ್ತು ಇಬ್ಬರು ಹೆಣ್ಣು ಮಕ್ಕಳಿಗೆ ಅಂದರೆ ಬ್ರಾಹ್ಮಿ, ಸುಂದರಿಯರಿಗೆ ಆದಿನಾಥನು ಸಿದ್ಧಂನಮಃ ಎಂದು ಸಿದ್ಧರ ಸ್ಮರಣೆಮಾಡಿ ಲಿಪಿಯನ್ನು ಅಂಕಗಣಿತವನ್ನೂ ಹೇಳಿಕೊಟ್ಟನು. ಪುತ್ರಿಯರಿಗೆ ಸ್ವಾಮಿಯು ವಾಙ್ಮಯವನ್ನೇ ಧಾರೆಯೆರೆದನು. ಈ ಪುತ್ರಿಯರ ಕಲೆಗಳೂ ವ್ಯಾಕರಣ ದೀಪಿಕೆಯಿಂದ ಬೆಳಗುತ್ತಾ ಬಂದವು. ಗುರುವಿನ ಅನುಗ್ರಹದಿಂದ ಬ್ರಾಹ್ಮಿ ಸುಂದರಿಯರು ಸರಸ್ವತಿಯರೇ ಆದರು.

ನಂತರ ಆಧಿನಾಥನು ಪ್ರಜೆಗಳಿಗೆ ಷಟ್ಕರ್ಮಗಳನ್ನು ಉಪದೇಶಿಸಿದನು. ಅಸಿ, ಮಸಿ, ಕೃಷಿ, ವಾಣಿಜ್ಯ ವಿದ್ಯ, ಶಿಲ್ಪ ಇವು ಷಟ್ಕರ್ಮಗಳು ಹಾಗೂ ಮೂರು ವರ್ಣಾಶ್ರಮಗಳನ್ನು ಮಾಡಿದನು. ಪ್ರಜೆಗಳನ್ನು ರಕ್ಷಿಸುವ ಶಸ್ತ್ರ ಹಿಡಿದು ಜೀವಿಸುವವರು ಕ್ಷತ್ರಿಯರು, ಕೃಷಿ, ಪಶುಪಾಲನೆ ಮತ್ತು ವ್ಯಾಪಾರ ದಿಂದ ಜೀವಿಸುವವರು, ವೈಶ್ಯರು ಸೇವೆಯನ್ನು ಮಾಡುವವರು ಶೂದ್ರರು, ಪ್ರಜೆ ಗಳು ತಂತಮ್ಮ ಯೋಗ್ಯತೆಗೆ ತಕ್ಕಂತೆ ಉಚಿತವಾದ ಕಾರ್ಯವನ್ನು ವೃತ್ತಿಸಂಕರ ಮಾಡದೆ ಮಾಡುತ್ತಿದ್ದರು. ಯುಗದ ಆದಿಬ್ರಹ್ಮನಾದ, ಆದಿನಾಥನು ಈ ಯುಗ ವನ್ನು ರೂಪಿಸಿದ್ದರಿಂದ ಇದು ಕೃತಯುಗವೆನಿಸಿತು. ಆದಿನಾಥನು ಪ್ರಜಾಪತಿ ಯೆನಿಸಿದನು. ಹಾಗೂ ನಾಭಿರಾಜನು ಇತನನ್ನು ರಾಜಾಧಿರಾಜನೆಂದು ಹೇಳ ಕಿರೀಟಧಾರಣೆ ಮಾಡಿ ವೈಭವದಿಂದ ಅಭಿಷೇಕ ಮಾಡಿದನು.

ವೃಷಭನಾಥನು ಕುರುವಂಶ, ಹರಿವಂಶ, ನಾಥವಂಶ ಹಾಗೂ ಉಗ್ರವಂಶ ವೆಂದು ವಿಭಾಗಿಸಿದನು. ಆದಿದೇವನು ಕಬ್ಬಿನ ರಸವನ್ನು ಸಂಗ್ರಹಿಸುವ ಉಪಾಯ ವನ್ನು ತಿಳಿಸಿ "ಇಕ್ಷ್ವಾಕು" ವಂಶ ಎಂಬುದನ್ನು ಅನ್ವರ್ಥಮಾಡಿಕೊಂಡನು. ಆದಿನಾಥನು ತನ್ನ ಮಕ್ಕಳಿಗೂ, ರಾಜ್ಯ ವಸ್ತುವಾಹನ ಸಂಪತ್ತುಗಳನ್ನು ಹಂಚಿ, ಕೊಟ್ಟನು. ಹೀಗೆ ಕಾಲವು ಕಳೆಯಲು ಭಗವಂತನನ್ನು ವಿರಕ್ತನನ್ನಾಗಿ ಮಾಡಲು ದೇವೇಂದ್ರನು ಆಯುಷ್ಯದ ಅಂಚಿನಲ್ಲಿರುವ ನೀಲಾಂಜನೆಯೆಂಬ ಸುರನರ್ತಕಿಯನ್ನು ವೃಷಭನಾಥನ ಆಸ್ಥಾನದಲ್ಲಿ ನರ್ತನ ಮಾಡಿಸಲು ಎಲ್ಲರೂ ನೋಡುತ್ತಿರುವಾಗಲೇ ಅದೃಶ್ಯವಾದಳು. ರಸಭಂಗವಾಗದ ಹಾಗೆ ದೇವೇಂದ್ರನು ಇನ್ನೊಂದು ನೀಲಾಂಜನೆ ಪಾತ್ರವನ್ನು ಜಾಣ್ಮೆಯಿಂದ ನಿಲ್ಲಿಸಿದನು. ಆಸ್ಥಾನದಲ್ಲಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾರಿಗೂ ಇದು ತಿಳಿಯಲಿಲ್ಲ ಆದರೆ ಆದಿನಾಥನು ಈ ರಹಸ್ಯವನ್ನು ತಿಳಿದು ಸಂಸಾರದಲ್ಲಿ ನಿರ್ವೇಗಪರನಾದನು. ಈ ಸಂಸಾರ ಶರೀರ ಭೋಗಾದಿಗಳು ಅವನಿಗೆ ಶೂನ್ಯವಾಗಿ ಭಾಸವಾದವು. ಅವಧಿ ಜ್ಞಾನಿಯಾದ ದೇವೇಂದ್ರನು ಇದನ್ನು ಗ್ರಹಿಸಿದನು. ಆಗಲೇ ಲೌಕಾಂತಿಕ ದೇವತೆಗಳು ಅಂದರೆ ದೇವರ್ಷಿಗಳು ಬ್ರಹ್ಮ ಲೋಕದಿಂದ ಬಂದು ಸ್ವಾಮಿಯ ವೈರಾಗ್ಯವನ್ನು ಉದ್ದೀಪನಗೊಳಿಸಿ ಸ್ವಾಮಿಯ ಪರಿನಿಷ್ಕ್ರಮಣ ಕಲ್ಯಾಣಕ್ಕೆ ಪುರೋಹಿತರಾದರು. ಸಮ್ಯಗ್ ದರ್ಶನ ಜ್ಞಾನ ಚಾರಿತ್ರರೂಪವಾದ ಮೋಕ್ಷ ಮಾರ್ಗವನ್ನು ತಿಳಿದಿರುವ ನೀನು ಬುದ್ಧನೂ, ಸ್ವಯಂ ಬುದ್ಧನೂ ಆಗಿರುವೆ. ಹುಟ್ಟಿನಿಂದಲೇ ಸನ್ಯಾಸಿಯಾಗಿರುವೆ, (ನಾವುಗಳು) ಉಪಚಾರಕ್ಕಾಗಿ ಬಂದಿರುವೆವು. ನಿನಗೆ ನೆಪಮಾತ್ರದ ಉಪದೇಶ ಮಾಡುವೆವು, ನೀನು ಮತ್ತೆ ನಮಗೆ ಧರ್ಮವನ್ನು ಬೋಧಿಸುವೆ. ನೀನು ಧರ್ಮಾಮೃತವನ್ನು ಕರೆಯಲು ಸೂಕ್ತವಾದ ಕಾಲ. ಮೋಹವನ್ನು ಜಯಿಸಿ ಮೋಕ್ಷಕ್ಕೆ ಸನ್ನದ್ಧನಾಗು ಎಂದು ಹೇಳಿ, ಲೌಕಾಂತಿಕ ದೇವತೆಗಳು ತಮ್ಮ ಲೋಕಕ್ಕೆ ಹೋದರು. ಕೂಡಲೇ ದೇವೇಂದ್ರನು ಸಕಲ ದೇವತೆಗಳೊಡನೆ ಅಯೋಧ್ಯೆಗೆ ಬಂದು ಪರಿನಿಷ್ಕ್ರಮಣ ಕಲ್ಯಾಣವನ್ನು ಬಹಳ ಭಕ್ತಿಯಿಂದ ಮಾಡಿದನು. ಆದಿದೇವನು ಅಯೋಧ್ಯೆಯ ಅನತಿ ದೂರದಲ್ಲಿರುವ ಸಿದ್ಧಾರ್ಥಕ ವನದಲ್ಲಿ ಚಂದ್ರಕಾಂತ ಶಿಲೆಯ ಮೇಲೆ ಕುಳಿತು ನಮಃಸಿದ್ಧೇಭ್ಯಃ ಎಂದು ಸಿದ್ಧರನ್ನು ನೆನೆದು ಪಂಚಮುಷ್ಟಿಯಿಂದ ಕೂದಲನ್ನು ಕಿತ್ತು ಸಕಲ ಪರಿಗ್ರಹವನ್ನು ತೊರೆದು ಆರು ತಿಂಗಳ ಉಪವಾಸವನ್ನು ಕೈಗೊಂಡು ಮೌನಿಯಾಗಿ ದಿಗಂಬರ ಮುನಿಯಾದನು. ಸ್ವಾಮಿಯು ತ್ಯಜಿಸಿದ ವಸ್ತ್ರಾಭರಣಗಳು ಉಡಿಗೆಗಳನ್ನು ಸಂಗ್ರಹಿಸಿ ದೇವತೆಗಳು ಅಸಾಮಾನ್ಯರಂತೆ ಬೀಗಿದರು. ಸ್ವಾಮಿಯ ತಲೆಗೂದಲನ್ನು ದೇವೇಂದ್ರನು ಚಿನ್ನದ ಹರಿವಾಣದಲ್ಲಿ ತೆಗೆದುಕೊಂಡು ಹೋಗಿ ಕ್ಷೀರಸಮುದ್ರದಲ್ಲಿ ಬಿಟ್ಟನು.

ಭರತರಾಜನೂ ಬಾಹುಬಲಿ ಕುಮಾರನೂ ಭಕ್ತಿಯಿಂದ ಬಂದು, ಧ್ಯಾನದಲ್ಲಿ ತನ್ಮಯನಾದ ಆತ್ಮ ಸ್ವರೂಪವನ್ನು ಸಾಧಿಸುತ್ತಿರುವ ಆದಿನಾಥನನ್ನು ಅಷ್ಟವಿಧ ಅರ್ಚನೆಯಿಂದ ಪೂಜಿಸಿದರು. ಆರು ತಿಂಗಳ ಉಪವಾಸದ ನಂತರ ಸ್ವಾಮಿಯು ಆಹಾರಕ್ಕಾಗಿ ನಗರಕ್ಕೆ ಬಂದರೂ ಸಹ ಯಾರಿಗೂ ಆಹಾರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕೊಡುವ ವಿಧಾನ ತಿಳಿಯದ್ದರಿಂದ ಮತ್ತೆ ಆರು ತಿಂಗಳು ಉಪವಾಸ ಕೈಗೊಂಡು ಧ್ಯಾನರೂಢನಾದನು. ಲೋಕ ಆಶ್ಚರ್ಯಗೊಂಡಿತೇ ವಿನಃ ಮುನಿ ಧರ್ಮದ ರಹಸ್ಯ ತಿಳಿಯಲಿಲ್ಲ.

ವೃಷಭದೇವನು ಒಂದು ವರ್ಷ ಉಪವಾಸದ ನಂತರ ಪುನಃ ಆಹಾರಕ್ಕಾಗಿ ಹಸ್ತಿನಾಪುರದ ಕಡೆ ಬಂದನು ಆ ಪುರವನ್ನು ಸೋಮಪ್ರಭ ರಾಜನು ಆಳುತ್ತಿದ್ದನು. ಅವನ ತಮ್ಮ ಶ್ರೇಯಾಂಸಕುಮಾರ. ಇವನು, ಸ್ವಾಮಿಯು ಆಹಾರಕ್ಕಾಗಿ ಹಸ್ತಿನಾಪುರ ಪ್ರವೇಶಕ್ಕೆ ಮೊದಲೇ ಬೆಳಗಿನ ಝಾವದಲ್ಲಿ ಶುಭಸ್ವಪ್ನಗಳನ್ನು ಕಂಡು, ಅದರ ಫಲವನ್ನು ಪುರೋಹಿತರಿಂದ ತಿಳಿದು ಸ್ವಾಮಿಯು ತಮ್ಮ ಅರಮನೆ ಕಡೆ ಬರುವನೆಂದು ತಿಳಿದು, ಸ್ವಾಮಿಯನ್ನು ಎದುರುಗೊಳ್ಳಲು ಸೋಮಪ್ರಭ ರಾಜ, ರಾಣಿ ಶ್ರೇಯಾಂಸಕುಮಾರ ಮೂವರೂ ಸಿದ್ಧರಾಗಿ ಅರಮನೆ ಮುಖದ್ವಾರದಲ್ಲಿ ಬಹಳ ಭಕ್ತಿಯಿಂದ ನಿಲ್ಲಲು, ಆದಿಬ್ರಹ್ಮನನ್ನು ದೂರದಲ್ಲಿ ಕಂಡಾಕ್ಷಣ ಶ್ರೇಯಾಂಸಕುಮಾರನಿಗೆ ಜಾತಿಸ್ಮರಣೆಯಾಗಿ, ಹಿಂದಿನ ಭವಗಳಲ್ಲಿ ಆಹಾರ ದಾನಮಾಡಿದ ವಿಧಿ ಜ್ಞಾಪಕವಾಗಿ, ಸ್ವಾಮಿಯನ್ನು ಬಲಗೊಂಡು ವಿಧಿಪೂರ್ವಕವಾಗಿ ನಿಲ್ಲಿಸಿ ಕಬ್ಬಿನ ಹಾಲನ್ನು ಆದಿನಾಥರಿಗೆ ಆಹಾರ ದಾನ ಕೊಡಲು, ಕೂಡಲೇ ಪಂಚಾಶ್ಚರ್ಯವಾಯಿತು. ಭಗವಂತನು ಆಹಾರ ಮುಗಿಸಿ ಪುನಃ ತಪೋವನಕ್ಕೆ ಬಂದು ಧ್ಯಾನಾರೂಢನಾಗಿ ಕರ್ಮಗಳನ್ನು ಜಯಿಸಲು ತಪಸ್ಸನ್ನು ಮಾಡಲುಪಕ್ರಮಿಸಿದನು.

ಭರತೇಶನು ಆಸ್ಥಾನದಲ್ಲಿರುವಾಗ ಆದಿನಾಥನಿಗೆ ಕೇವಲ ಜ್ಞಾನ ಪ್ರಾಪ್ತಿಯಾಯಿತೆಂದೂ ಆಯುಧಾಗಾರದಲ್ಲಿ ಚಕ್ರರತ್ನ ಉದಯವಾಗಿದೆಯೆಂದೂ, ಪುತ್ರರತ್ನವಾಯಿತೆಂದೂ 3 ಶುಭಸುದ್ದಿಗಳನ್ನು ಕೇಳಿ, ಮೊದಲು ಸ್ವಾಮಿಯು ಕೇವಲ ಜ್ಞಾನ ಪೂಜೆಯನ್ನು ಮುಗಿಸಿ, ನಂತರ ಚಕ್ರರತ್ನದ ಪೂಜೆ ಮುಗಿಸಿ, ಪುತ್ರನನ್ನು ನೋಡಿ ಆನಂದಿಸಿದನು, ನಂತರ ದಿಗ್ವಿಜಯಕ್ಕೆ ಹೋಗಿ 6 ಖಂಡಗಳನ್ನು ಗೆದ್ದು ಹಿಂದಿರುಗಲು, ಅಯೋಧ್ಯೆಯನ್ನು ಪ್ರವೇಶಮಾಡದೆ ನಿಂತ ಚಕ್ರರತ್ನವನ್ನು ಕಂಡು ಭರತಚಕ್ರಿಯು ಕಾರಣವನ್ನು ತಿಳಿದು ತನ್ನ ಸಹೋದರರಿಗೆ ಲೇಖನವನ್ನು ಕಳಿಸಿದನು. ರಾಜಕುಮಾರರು ಒಟ್ಟಿಗೆ ಸೇರಿ ಭರತೇಶನ ತಮ್ಮಂದಿರಾದ 99 ಜನ ಒಂದು ಅಭಿಪ್ರಾಯಕ್ಕೆ ಬಂದು, ಭರತಚಕ್ರಿಯ ದೂತನನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕರೆಸಿ, ತಂದೆ ಇಲ್ಲದಾಗ ಅಣ್ಣನು ಪೂಜ್ಯನೆ ಹೌದು, ಆದರೆ ತಂದೆಯು ಸರ್ವಜ್ಞ ನಾಗಿ ವಿರಾಜಮಾನರಾಗಿರುವನು. ನಮಗೆ ಸಂಪತ್ತನ್ನು ಕೊಟ್ಟವನು ಅವನು ಭರತನು ನಮ್ಮಿಂದ ತೆಗೆದುಕೊಳ್ಳುವುದೂ ಇಲ್ಲ, ಅವನಿಂದ ನಾವು ಪಡೆಯ ಬೇಕಾದ್ದೂ ಇಲ್ಲವೆಂದು ತಿಳಿಸಿ, ವೃಷಭನಾಥನನ್ನು ಕಾಣಲು ಸಮವ ಸರಣಕ್ಕೆ ಹೋಗಿ, ಸರ್ವಜ್ಞನನ್ನು ಕಾಣುತ್ತಿದ್ದ ಹಾಗೆ ನಿರ್ವೇಗಪರರಾಗಿ ಸಂಸಾರದ ಅಸಾರತೆಯನ್ನು ಚಿಂತಿಸಿ, ಸ್ವಾಮಿಯಿಂದಲೇ ದೀಕ್ಷೆ ಪಡೆದು ದಿಗಂಬರ ಮುನಿ ಗಳಾದರು.

ಇತ್ತ ಭರತೇಶನು ಈ ಸಮಾಚಾರ ಕೇಳಿ ವಿಹ್ವಲಗೊಂಡರೂ, ಬಾಹುಬಲಿ ಕುಮಾರನನ್ನು ಹೇಗೆ ತಲೆಬಾಗಿಸುವುದೆಂದು ಯೋಚಿಸಿ, ಮಂತ್ರಲೋಚನೆಯಲ್ಲಿ ನಿಪುಣನಾದ ದಕ್ಷಿಣಾಂಕನನ್ನು ಕರೆಸಿ ಲೇಖನವನ್ನು ಕೊಟ್ಟು, ಬಾಹುಬಲಿಯಲ್ಲಿಗೆ ಕಳಿಸಿಕೊಟ್ಟನು. ಆ ದಕ್ಷಿಣಾಂಕನು ಉಚಿತವಾದ ವಾಹನವನ್ನೇರಿದವನೂ ವಯಸ್ಸಿನಿಂದ ಅತಿಕಠಿಣ ಅಲ್ಲದವನೂ ನಮ್ರವಾದ ವೇಷವುಳ್ಳವನೂ ಆಗಿ ಬಾಹುಬಲಿಕುಮಾರನ ಬಳಿಗೆ ಹೊರಟನು. ಬಹಳ ದೂರ ಪ್ರಯಾಣಮಾಡಿ ಬಾಹುಬಲಿ ಕುಮಾರನಿದ್ದ ಪೌದನಾಪುರವನ್ನು ತಲುಪಿದನು. ಆ ಪಟ್ಟಣದ ಹೊರಗಿನ ಪ್ರದೇಶದ ಸುಂದರತೆಯನ್ನು ಕಂಡು ಆನಂದಿಸಿದನು. ನಗರದ ಗೋಪುರವನ್ನು ದಾಟಿ ವರ್ತಕರ ಬೀದಿಯನ್ನು ನೋಡುತ್ತಿರುವ ನೂತನ ರತ್ನರಾಶಿಗಳನ್ನು ನಿಧಿಗಳೇನೋಪಾದಿಯಲ್ಲಿ ನೋಡಿದನು. ಬೇರೆ ದೊರೆ ಗಳಿಂದ ಕೈಗಾಣಿಕೆಯಾಗಿ ಬಂದಿರುವ ಕುದುರೆಗಳ ಜೊಲ್ಲಿನಿಂದಲೂ, ಆನೆಗಳ ಮದಜಲದಿಂದಲೂ ಕೆಸರು ಮಾಡಲ್ಪಟ್ಟಿರುವುದೂ ನೀರನ್ನು ಚಿಮುಕಿಸಲ್ಪಟ್ಟಂತಿ ರುವುದೂ ಆದ ರಾಜಾಂಗಣವನ್ನು ನೋಡಿ ಸಂತೋಷಪಟ್ಟನು ದಕ್ಷಿಣಾಂಕನು ಮಹಾದ್ವಾರಪಾಲಕರಿಂದ ತಿಳಿಸಲ್ಪಟ್ಟ ಸಮಾಚಾರವುಳ್ಳವನೂ ರಾಜಪೀಠದಲ್ಲಿ ಕುಳಿತಿರುವವನೂ ಆದ ಬಾಹುಬಲಿಕುಮಾರನನ್ನು ನೋಡಿದನು. ವಿಶಾಲವಾದ ಎದೆಯುಳ್ಳವನೂ, ಉನ್ನತವಾದ ಕಿರೀಟವೆಂಬ ಉನ್ನತವಾದ ಶಿಖರ ಉಳ್ಳವನೂ ಜಯಲಕ್ಷ್ಮಿಯ ಕ್ರೀಡಾ ಪರ್ವತವೋ ಎಂಬಂತಿರುವನೂ, ಜಯಲಕ್ಷ್ಮಿಯ ವಿವಾಹದ ಪಟ್ಟವೋ ಎಂಬಂತಿರುವ ಪಟ್ಟಬಂಧವನ್ನು ಧರಿಸಿರುವ ವಿಶಾಲವೂ ಉನ್ನತವೂ ಆದ ಹಣೆಯನ್ನು ಧರಿಸಿದವನೂ ಸಮಸ್ತರಾಜರುಗಳ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಶಸ್ಸೆಂಬ ಧನವನ್ನು ತೂಗಿಸುವುದೂ ಭೂಭಾರವನ್ನು ಧರಿಸುವುದೂ ಆದ ಭುಜದಂಡವನು ಧರಿಸಿರುವನೂ ಮುಖದಲ್ಲಿ ತಾವರೆ ಕಾಂತಿಯನ್ನು ಕಣ್ಣುಗಳಲ್ಲಿ ನೈದಿಲೆಯ ಶೋಭೆಯನ್ನು ಧರಿಸಿರುವನೂ ವಾಗ್ದೇವಿಗೆ ಮನಸ್ಸನ್ನು ಲಕ್ಷ್ಮೀದೇವಿಗೆ ಎದೆಯನ್ನು ಧರಿಸಿರುವನೂ, ಮಹಾತ್ಮರು ಸ್ಮರಿಸುವಂತಹ ಗುಣಸಮೂಹವುಳ್ಳವನೂ ಚಂದ್ರನಂತೆ ಮನೋಹರವಾದ ಮುಖದಿಂದಲೂ ಕಮಲದಂತೆ ಕೆಂಪಾದ ಪಾದಗಳಿಂದಲೂ ವಜ್ರದಂತೆ ಗಟ್ಟಿಯಾದ ಶರೀರದಿಂದಲೂ ಶೋಭಿಸುವನೂ, ಲೋಕಕ್ಕೆ ಆಧಾರವನ್ನು ಕೊಡಲೋಸುಗ ಆದಿಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಒಂದು ಪಚ್ಚೆಯ ಕಲ್ಲಿನ ಕಂಬವೊ ಎಂಬಂತೆ ಹಸಿರುಬಣ್ಣದ ಕಾಂತಿಯುಳ್ಳವನೂ ತೇಜೋಮಯವಾದ ಪರಮಾಣುಗಳಿಂದ ಮಾಡಲ್ಪಟ್ಟದೆಯೊ ಎಂಬಂತಿರುವ ಶ್ರೇಷ್ಠ ಜ್ವಾಲೆಯುಳ್ಳ ತೇಜಸ್ಸುಗಳ ರಾಶಿಯೊ ಎಂಬಂತಿರುವ ಬಾಹುಬಲಿ ಸ್ವಾಮಿಯನ್ನು ದೂರದಿಂದಲೇ ಕಂಡು ದಕ್ಷಿಣಾಂಕನು ಅಲ್ಲಿಂದಲೇ ನಮ್ರವಾದ ಮಸ್ತಕವನ್ನು ಧರಿಸಿದವನಾಗಿ ಬಂದು ಬಾಹುಬಲಿ ಸ್ವಾಮಿಯ ಪಾದಗಳಿಗೆ ನಮಸ್ಕಾರ ಮಾಡಿದನು. ಕೂಡಲೇ ಬಾಹುಬಲಿ ಕುಮಾರನು ಅವನನ್ನು ಸತ್ಕರಿಸಿ ಸಮೀಪದಲ್ಲಿ ಕುಳ್ಳಿರಿಸಿದನು.ದಕ್ಷಿಣಾಂಕನು ಬಾಹುಬಲಿ ಕುಮಾರನನ್ನು ನೋಡಿದ ಮಾತ್ರಕ್ಕೇ ಕ್ಷಣ ಕಾಲ ತನ್ನನ್ನು ತಾನು ಮರೆತುಹೋದನು. ಬಾಹುಬಲಿ ಕುಮಾರನು ದಕ್ಷಿಣಾಂಕನನ್ನು ಕುರಿತು, ಅಯ್ಯಾ, ಬಹಳಕಾಲದ ಮೇಲೆ ಚಕ್ರವರ್ತಿಗೆ ನಮ್ಮ ನೆನಪು ಬಂದಿದೆಯಲ್ಲ! ಆತನು ಲೋಕಪಾಲಕನಾಗಿದ್ದು, ಚಿಂತಿಸುವುದಕ್ಕೆ ಯೋಗ್ಯವಾದ ಅನೇಕ ವಿಷಯಗಳುಳ್ಳವನು ಆದ ಚಕ್ರವರ್ತಿ ಕ್ಷೇಮವೇ? ಈಗಲೂ ಸಮಸ್ತ ಕ್ಷತ್ರಿಯರನ್ನು ಜಯಿಸುವ ಕೆಲಸವನ್ನು ಪೂರ್ತಿ ಮಾಡದಿರುವ, ರಾಜರುಗಳ ಪಾಲಕನಾಗಿರುವ ಭರತೇಶ್ವರನ ಪ್ರಸಿದ್ಧವಾದ ಬಲತೋಳು ನೆಮ್ಮದಿಯಾಗಿದೆಯೆ? ಸಮಸ್ತ ದಿಕ್ಕುಗಳನ್ನು ಸ್ವಾಧೀನ ಮಾಡಿಕೊಂಡನೆಂದು ಸಮಸ್ತ ರಾಜರುಗಳನ್ನು ಜಯಿಸಿದನೆಂದೂ ಕೇಳಲ್ಪಟ್ಟೆವು. ಈಗ ಇನ್ನೂ ಮಾಡತಕ್ಕ ಕೆಲಸವು ಚಕ್ರವರ್ತಿಗೆ ಉಳಿದಿದೆಯೋ? ಇಲ್ಲವೋ? ಹೇಳು ಎಂದು ಅತ್ಯಂತ ಶಾಂತಭಾವವೂ, ಗರ್ವಯುಕ್ತವೂ, ಸ್ವಾರ್ಥಗರ್ಭಿತವೂ ಆದ ಮಿತವಾದ ಮಾತುಗಳನ್ನಾಡಿದನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದಕ್ಷಿಣಾಂಕನು ಚತುರತೆಯಿಂದ ತನ್ನ ಚಕ್ರವರ್ತಿಯ ವಿಚಾರ ಹೇಳಲು ಪ್ರಾರಂಭಿಸಿದನು. ಹೇ ಸ್ವಾಮಿ, ಈ ನಿನ್ನ ವಚನವೆಂಬ ಕನ್ನಡಿಯಲ್ಲಿ ಮುಂದೆ ಮಾಡತಕ್ಕ ಕೆಲಸವು ಸ್ಪಷ್ಟವಾಗಿ ಕಾಣುವುದು. ಸಂಸ್ಕಾರವಿಲ್ಲದ ನನ್ನಂಥಹ ಮೂರ್ಖನೂ ಕನ್ನಡಿಯಲ್ಲಿರುವುದನ್ನು ನೋಡಬಲ್ಲನು. ನಾವು ಪ್ರಭುವಿನ ಆಜ್ಞಾಪಾಲಕರು ಗುಣದೋಷ ವಿಚಾರಗಳಲ್ಲಿ ನಮ್ಮ ಪ್ರವೇಶವಿಲ್ಲ. ತಾವು ಚಕ್ರವರ್ತಿಯಲ್ಲಿ ಗೌರವವಿಟ್ಟು ಆತನ ಉಪದೇಶವನ್ನು ಕೇಳಬೇಕು. ಹಿರಿಯರ ಮಾತಿನಲ್ಲಿ ಭೇದವೆಣಿಸಬಾರದೆಂದು ಶಾಸ್ತ್ರದಲ್ಲೇ ಹೇಳಿದೆ. ಆದ್ದರಿಂದ ಭರತೇಶನ ಆಜ್ಞೆಯನ್ನು ನೀವು ಪಾಲಿಸಬೇಕು. ಇಕ್ಷ್ವಾಕುವಂಶೋದ್ಭವನೂ, ಪ್ರಥಮ ಚಕ್ರೇಶನೂ, ನಿಮ್ಮಣ್ಣನೂ ಆದ ಭರತನು ದೇವತೆಗಳನ್ನು ನಮ್ರರನ್ನಾಗಿ ಮಾಡಿದನು ಸಮಸ್ತ ಪೃಥ್ವಿಯನ್ನು ಜಯಿಸಿದನು. ಗಂಗಾದ್ವಾರವನ್ನು ದಾಟಿದನು. ನೀರಿನಲ್ಲಿ ಅಡಗಿದ್ದ ದೇವತೆಗಳನ್ನು ಬಾಣಪ್ರಯೋಗದಿಂದಲೇ ಕಟ್ಟಿ ತರಿಸಿಕೊಂಡನು. ಇವನು ಬಿಟ್ಟ ಬಾಣವು ಮಹಾಸಾಗರದಲ್ಲಿ ಹನ್ನೆರಡು ಯೋಜನದವರೆಗೆ ನುಗ್ಗಿ ಮಾಗಧಾಮರನ ಅರಮನೆಗೆ ನಾಟಿತು. ಭರತಚಕ್ರಿಯು ವಿಜಯಾರ್ಧಾಧಿಪತಿಯನ್ನು, ಕೃತಮಾಲಾದಿ ದೇವತೆಗಳನ್ನು ನಮ್ರರನ್ನಾಗಿ ಮಾಡಿದನು. ದಕ್ಷಿಣೋತ್ತರಶ್ರೇಣಿಯ ವಿದ್ಯಾಧರರೆಲ್ಲ ವಿಧೇಯರಾದರು. ತಮಿಸ್ರ ಗುಹೆಯನ್ನು ದಾಟಿ ಪರ್ವತದ ಉತ್ತರ ದಿಕ್ಕನ್ನು ಸೇರಿ ಮ್ಲೇಚ್ಛರನ್ನೆಲ್ಲಾ ಶರಣಾಗತರನ್ನಾಗಿ ಮಾಡಲು ದೇವತೆಗಳು ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ಇವನ ಕೀರ್ತಿಯು ಪರ್ವತಗಳ ಶಿಖರಗಳಲ್ಲಿ ನೆಲದಾವರೆಯಾಗಿ ಅರಳಿದೆ. ಗಂಗಾ-ಸಿಂಧೂ ದೇವಿಯರು ಇವನಿಗೆ ರತ್ನಾಭಿಷೇಕವನ್ನು ಮಾಡಿದರು. ವೃಷಭಾದ್ರಿಯಲ್ಲಿ ಇವನ ಕೀರ್ತಿಯನ್ನು ಕೊರೆದಿದೆ ಲಕ್ಷ್ಮಿಯು ಈತನಿಗೆ ದಾಸಿಯಾಗಿರುವಳು. ಚಿಂತಾಮಣಿಯೇ ಇವನ ಕೈಯಲ್ಲಿದೆ. ಜಗನ್ಮಾನ್ಯನಾದ ಭರತಚಕ್ರಿಯು ನಿನಗೆ ಆಶೀರ್ವಾದವನ್ನು ಕಳಿಸಿ ಸತ್ಕರಿಸಿರುವನು.

"ನಾನು ಸಮಸ್ತ ದ್ವೀಪಗಳನ್ನು ಸಮುದ್ರಗಳನ್ನು ಆಕ್ರಮಿಸಿರುವೆನು. ಬಾಹುಬಲಿಯು ನನ್ನ ಪ್ರೀತಿಯ ಸಹೋದರನಾಗಿರುವನು. ಅವನಿಲ್ಲದ ನನ್ನ ರಾಜ್ಯ ವೈಭವ ಶೋಭಿಸುವುದಿಲ್ಲ. ಬಂಧು ಬಾಂಧವರೊಡನೆ ಸುಖವನ್ನು ಹಂಚಿಕೊಂಡು ಅನುಭವಿಸಬೇಕು, ಆಗಲೆ ಸುಖಕ್ಕೂ ಐಶ್ವರ್ಯಕ್ಕೂ ಬೆಲೆಯು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬರುವುದು. ಬಂಧುವಾದವರು ತಗ್ಗಿಬಗ್ಗಿ ನಡೆಯದಿದ್ದರೆ ಮನಸ್ಸಿಗೆ ತುಂಬಾ ವ್ಯಥೆಯುಂಟಾಗುವುದು. ಪ್ರಭುವೆ ಆದ್ದರಿಂದ ನೀನು ಬಂದು ಚಕ್ರವರ್ತಿಯನ್ನು ಪೂಜಿಸು, ತಪ್ಪುಮಾಡಿದವನನ್ನು ಅವನು ಕ್ಷಮಿಸುವುದಿಲ್ಲ. ಚಕ್ರವರ್ತಿಯ ಆಜ್ಞೆಯನ್ನು ತಿರಸ್ಕರಿಸಿದವರನ್ನು ಚಕ್ರವು ದಂಡಿಸುವುದು. ಆದ್ದರಿಂದ, ಆಯುಷ್ಮಂತನೆ! ಶೀಘ್ರವಾಗಿ ಬಂದು ಭರತೇಶ್ವರನ ಇಷ್ಟಾರ್ಥವನ್ನು ಪೂರ್ತಿಮಾಡು, ನಿಮ್ಮಿಬ್ಬರ ಸೇರುವಿಕೆಯಿಂದ ಸಮಸ್ತ ಲೋಕವೂ ಸೇರಿದಂತೆ ಆಗಲಿ ಈ ಪ್ರಕಾರವಾಗಿ ದಕ್ಷಿಣಾಂಕನು ನುಡಿದ ಮೇಲೆ ಬಾಹುಬಲಿ ಕುಮಾರನು ವಿವೇಕದಿಂದ, ಮ.ಗುಳ್ನಗೆಯಿಂದ, ಗಂಭೀರವಾದ ಅರ್ಥವುಳ್ಳ ಧೀರವಾಣಿಯಿಂದ ಹೇಳಿದನು.

ಎಲೈ ದೂತನೆ! ಪ್ರಭುವಿಗೆ ಸದಾಚಾರವನ್ನು ಸಂಯೋಜನ ಮಾಡುವವನಾದ, ನಿನ್ನಿಂದ ಚೆನ್ನಾಗಿ ವಿಷಯ ಹೇಳಲ್ಪಟ್ಟಿತು. ಸಾಮೋಪಾಯವನ್ನು ಸ್ವಲ್ಪವಾಗಿ ತೋರಿಸುವನೂ, ಭೇದೋಪಾಯ ದಂಡೋಪಾಯಗಳನ್ನು ಹೆಚ್ಚಾಗಿ ತೋರಿಸುವವನೂ ಆದ ನೀನು, ಬೇರೆಯವರನ್ನು ವಿಧೇಯರನ್ನಾಗಿ ಮಾಡುವ ಕೆಲಸದಲ್ಲಿ ಸ್ವಾತಂತ್ರ್ಯವನ್ನು ತೋರಿಸಿದೆ. ಭರತೇಶ್ವರನಿಂದ, ನಮ್ಮಲ್ಲಿ ನಿಯುಕ್ತನಾದ ನೀನು ಅಸಾಧಾರಣನಾಗಿದ್ದೀಯೆ. ದುಷ್ಟನು ಬೇರೆಯವರ ದೋಷವನ್ನು ತನ್ನ ಗುಣವನ್ನು ತಾನು ವಿವರಿಸುತ್ತಾನೆ. ತನ್ನ ದೋಷವನ್ನು ಬೇರೆಯವರ ಗುಣವನ್ನು ಮುಚ್ಚುತ್ತಾನೆ ಸತ್ಪುರುಷರಿಗೆ ತಮ್ಮ ಪಲ್ಲದುದೂ ರಸವಿಲ್ಲದ ಫಲದಿಂದ ಲೋಕಕ್ಕೆ ತಾಪವನ್ನುಂಟುಮಾಡುವುದೂ ಆದ ಈ ದುರ್ಜನತ್ವವನ್ನು ದುಃಖದ ಲತೆಯನ್ನಾಗಿ ತಿಳಿಯುತ್ತೇನೆ. ನಮ್ಮಲ್ಲಿ ಗರ್ವವನ್ನು ಪ್ರಯೋಗಿಸುವ ನೀನು ಮೂರ್ಖನಂತೆ ಆಚರಿಸುತ್ತೀಯೆ. ಭರತೇಶ್ವರನು ವಯಸ್ಸಿನಿಂದ ದೊಡ್ಡವನಿರಬಹುದು. ಆದರ ಹೊಗಳಿಕೆಗೆ ಯೋಗ್ಯನಲ್ಲ. ಆನೆಯು ಮುದಿಯಾದ ಮಾತ್ರಕ್ಕೆ ಸಿಂಹದ ಮರಿಗೆ ಸಮಾನವೇನು

ಹಿರಿಯನಾದ ಅಣ್ಣನಿಗೆ ಎರಗುವುದರಲ್ಲಿ ತಪ್ಪಿಲ್ಲ. ಆದರೆ ತಲೆಯ ಮೇಲೆ ಕತ್ತಿಯನ್ನೇರಿಸಿದವನಿಗೆ ನಮಸ್ಕರಿಸುವುದು ಕ್ರಮವೆ? ರಾಜರೆಂಬ ನುಡಿಯು, ನನ್ನಲ್ಲಿಯೂ, ಭರತನಲ್ಲಿಯೂ, ಆದಿಬ್ರಹ್ಮ, ವೃಷಭಸ್ವಾಮಿಯಿಂದಲೇ ವಿಭಾಗಿಸಲ್ಪಟ್ಟಿದೆ. ಅತ್ಯಾಶೆಯುಳ್ಳವನಾದ ಭರತನು ರಾಜಾಧಿರಾಜನಾಗಿರಲಿ. ಶ್ರೇಷ್ಠ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ರಾಜ ವ್ಯಾಪಾರವುಳ್ಳ ನಾವು ರಾಜರಾಗಿಯೇ ಇರುತ್ತೇವೆ. ನಮ್ಮನ್ನು ಕರೆಸಿ ಎರಗಿಸಿಕೊಂಡು ಅವನು ಕೊಡುವ ಭೂಮಿಯು ಎಳ್ಳಿನ ಹಿಂಡಿಯಂತೆನಿಸುವುದು. ಅಭಿಮಾನಶಾಲಿಗಳಿಗೆ ಸ್ವರಾಜ್ಯವು ಎಷ್ಟೇ ಚಿಕ್ಕದಿರಲಿ ಅದೇ ಮಹತ್ತರವಾದುದು. ದಾಸ್ಯದಿಂದ ಸಿಗುವ ಸಾಮ್ರಾಜ್ಯವು ತುಚ್ಛವಾದುದು. ಅಂಜಿ ತಲೆಬಾಗಿದ ರಾಜನು ಪಶುಸಮಾನನು. ಮಾನವನ್ನು ಬಲಿಕೊಡವವರಿಗೆ ದೊರೆತನವಿದ್ದರೂ ತೇಜೋಹೀನರು. ಕುಲಾಭಿಮಾನವುಳ್ಳವನು ದಾಸ್ಯಕ್ಕೆ ತಲೆಬಾಗದೆ, ಕಾಡಿನಲ್ಲಾದರೂ ಇರುವನು ಅಥವಾ ಪ್ರಾಣವನ್ನಾದರೂ ಒಡುವನು. ಧೀರರು ಪ್ರಾಣಕ್ಕಿಂತ ಮಾನಕ್ಕೆ ಹೆಚ್ಚು ಬೆಲೆಕೊಡುವರು.

ದೂತನೇ! ನೀನು ಚಕ್ರೇಶನ ಪರಾಕ್ರಮವನ್ನು ಮೇರೆ ಮೀರಿ ವರ್ಣಿಸಿರುವೆ, ಕ್ಷತ್ರಿಯನು ನಾಶವಾಗದ ಯಶಸ್ಸನ್ನು ಧನವೆಂದು ರಕ್ಷಿಸಬೇಕು ನಾವು ಸಾಯುವಾಗ ರತ್ನಗಳು ನಮ್ಮನ್ನು ಹಿಂಬಾಲಿಸುವುದೆ ? ರಾಜ್ಯವು ಬರುವುದೆ ? ತಂದೆಯಿಂದ ಬಂದ, ನಮ್ಮ ರಾಜ್ಯಗಳನ್ನು ಭರತನು ನಾಶಮಾಡಬೇಕೆಂದಿರುವನು ಲೋಭಿಯಾದ ಇವನನ್ನು ತಿರಸ್ಕರಿಸುವುದೇ ಮೇಲು, ಪ್ರಯೋಜನವಿಲ್ಲದ ವ್ಯರ್ಥವಾದ ವೀರ ಭಾಷಣ ಸಾಕು. ನನ್ನ ಮತ್ತು ಭರತನ ಪೌರುಷವು ಯುದ್ಧವೆಂಬ ಒರೆಗಲ್ಲಿನಲ್ಲಾಗಲಿ. ನಮ್ಮಿಬ್ಬರ ಹೋರಾಟದಿಂದ ಏನಾಗುವುದೋ ಆಗಲಿ. ಇದು ನನ್ನ ಕೊನೆಯ ಮಾತು, ಹೋಗಿ ನಿನ್ನ ಚಕ್ರಿಯನ್ನು ಯುದ್ಧಸನ್ನದ್ಧನಾಗುವಂತೆ ಮಾಡು ಎಂದು ಬಾಹುಬಲಿಕುಮಾರನು ತನ್ನ ಸ್ವಾಭಿಮಾನವನ್ನು ಪ್ರಕಟಿಸಿದಾಗ, ದಕ್ಷಿಣಾಂಕನು ಕೂಡಲೇ ಹೊರಟುಹೋದನು.

ಭರತ ಹಾಗೂ ಬಾಹುಬಲಿ, ಈ ಎರಡೂ ಕಡೆಯವರ ಸಮಸ್ತ ಸೈನ್ಯವೂ ಯುದ್ಧಕ್ಕೆ ಅಣಿಯಾದವು. ಉದಯ ಪರ್ವತದಲ್ಲಿ, ಪೂರ್ವದಿಕ್ಕಿನಲ್ಲಿ ಸೂರ್ಯೋದಯವಾಗುತ್ತಿರಲು, ಮಲಗಿದ್ದ ಬಾಹುಬಲಿ ಕುಮಾರನನ್ನು ಎಚ್ಚರಿಸಲು ಸ್ತುತಿಪಾಠಕರು :—

"ಎಲೈ ರಾಜಶ್ರೇಷ್ಠನೆ, ನೀನು ಅರ್ಹತ್ ಪರಮೇಶ್ವರನ ಮಂಗಲಗಳಿಂದ ಎಚ್ಚರಗೊಳ್ಳುವನಾಗು. ಇದರಿಂದ ನಿನಗೆ ರಣರಂಗದಲ್ಲಿ ಜಯಲಕ್ಷ್ಮಿಯು ನಿನಗೆ ಒಲಿಯುವಳು. ಅಷ್ಟಮಹಾಪ್ರಾತಿಹಾರ್ಯವು ಯಾವನ ತ್ರಿಲೋಕ ವಿಜಯದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಗುರುತುಗಳಾಗಿವೆಯೊ ಅಂತಹ ಸಮಸ್ತ ಪ್ರಾಣಿಗಳಿಗೆ ಹಿತಕರವಾದ ವೃಷಭ ಸ್ವಾಮಿಯು ಜಯಶೀಲನಾಗಿದ್ದಾನೆ. ಜನ್ಮಸಂತಾಪವನ್ನು ನಾವು ಮಾಡುವುದು ಮೋಕ್ಷಫಲವನ್ನು ಕೊಡುವುದೂ ಯಾವನ ಪಾದಕಮಲದ ಜಯಶೀಲ ವಾಗಿದೆಯೋ ಅಂತಹ ಆದಿತೀರ್ಥಂಕರನು ನಿನ್ನನ್ನು ರಕ್ಷಿಸಲಿ, ಎಲೈ ಮನುಜಶ್ರೇಷ್ಟನೆ! ಭರತರಾಜನು ಕೂಡ ಉನ್ನತವಾದ ನಿಮ್ಮ ಬಾಹುವೆಂಬ ಅಗಳಿಯ ಸಮಾನತೆಯನ್ನು ಹೊಂದಲಿಲ್ಲ, ಈ ನಿಮ್ಮ ಬಾಹುಬಲವು ಹಾಗಿಲ್ಲಿ. ಯುದ್ಧವೆಂಬ ಒರೆಗಲ್ಲನ್ನು ಹೊಂದಿದ ನಿನ್ನ ದೃಷ್ಟಿಮಾತ್ರದಲ್ಲಿಯೂ ನಿಲ್ಲಲು ಯಾವರಾಜನೂ ಸಮರ್ಥನಿಲ್ಲ. ಎಲೈ ಭುಜಬಲ ಸ್ವಾಮಿಯೆ! ನಿದ್ರೆಯನ್ನು ಬಿಡು. ದೊಡ್ಡ ಕೆಲಸದಲ್ಲಿ ಜಾಗರೂಕನಾಗಿರು. ಶೀಘ್ರವಾಗಿ ಜಯಶ್ರಿಯನು ಹೊಂದಿ ಜಯಕ್ಕೋಸ್ಕರ ಉಪದೇಶಕನಾದ ಆದಿಜಿನನ್ನು ಮತ್ತೊಮ್ಮೆ ಭಕ್ತಿ ಯಿಂದ ನಮಸ್ಕರಿಸು. ಈ ಪ್ರಕಾರವಾದ ಜಯಮಂಗಲ ಶಬ್ದಗಳಿಂದ, ಪುನಃ ನಿಮಿತ್ತವಾಗಿ ಎಚ್ಚರಿಸಲ್ಪಟ್ಟವನಾದ ಬಾಹುಬಲಿಯು ನಿದ್ರೆಯಿಂದ ಎಚ್ಚೆತು ಶುಚಿರ್ಭೂತನಾಗಿ ಜಿನೇಶ್ವರನನ್ನು ಅನನ್ಯ ಭಕ್ತಿಯಿಂದ ಶುಭ ಪರಿಣಾಮದಿಂದ ಅಷ್ಟವಿಧ ಅರ್ಚನೆಗಳಿಂದ ಪೂಜಿಸಿ ವಂದಿಸಿ, ಯುದ್ಧಕ್ಕಾಗಿ ಸನ್ನದ್ಧನಾಗಿ ತನ್ನ ಸಮಸ್ತ ಸೈನ್ಯಗಳೊಡನೆ ರಣರಂಗಕ್ಕೆ ಅಂದರೆ ಯುದ್ಧೋಚಿತವಾದ ಭೂಮಿಗೆ ಹೊರಟನು.

ಭರತೇಶನ ಸೇನೆಯು ಆಕಾಶ ಭೂಮಿಗಳನ್ನು ವ್ಯಾಪಿಸಿತು. ಬಾಹುಬಲಿ ಮತ್ತು ಭರತೇಶ ಈರ್ವರೂ ರಣರಂಗದಲ್ಲಿ ಯುದ್ಧ ಸನ್ನದ್ಧರಾಗಿ ನಿಂತಿರುವದು ರಣಭೇರಿಗಳು ಮೊಳಗಿದವು.

ಆಗ ಸೈನಿಕರು ತಮ್ಮತಮ್ಮಲ್ಲಿ ಸಂಪೂರ್ಣ ಸನ್ನದ್ಧರಾಗಿ ಬಂದಿರುವ ಈ ಭರತ ಬಾಹುಬಲಿಗಳು ಮನಸ್ಸು ಮಾಡಿದರೆ ಈ ಯುದ್ಧವನ್ನು ತಪ್ಪಿಸುವುದ ಕ್ಕಾಗುವುದಿಲ್ಲವೆ? ಚಕ್ರೇಶನಿದಿರು ಬಾಹುಬಲ ಪರಾಕ್ರಮಿಯಾದ ಬಾಹುಬಲಿ ನಿಂತಿರುವನು. ಇವನು ಮಹಾಮಹಿಮನು, ಬಲವಾದ ಸೇನಾಸಂಪತ್ತಿನಿಂದ ಮಹಾಪುರುಷರನ್ನು ಮಣಿಸುವುದು ಕಷ್ಟ. ಆನೆಯ ಗುಂಪನ್ನು ಮುರಿಯಲು ಒಂದೇ ಒಂದು ಸಿಂಹವು ಸಾಲದೇ? ಜನರ ನಾಶಕ್ಕೆ ಕಾರಣವಾದ ಈ ಭರತ ಬಾಹುಬಲ ಯುದ್ಧವು ನಡೆಯಬಾರದು, ದೇವತೆಗಳಾದರೂ ಶಾಂತಿಯನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾಡಬಾರದೆ ಎಂದು ಹಲವು ರೀತಿಯಲ್ಲಿ ಹೆದರಿ ಮಾತನಾಡಿಕೊಳ್ಳುತ್ತಿದ್ದರು.

ಅಷ್ಟರಲ್ಲಿ ಎರಡೂ ಕಡೆಯ ಮಂತ್ರಿಗಳು ಸೇರಿ ಸಮಾಲೋಚನೆ ಮಾಡಿ, ಭರತ ಬಾಹುಬಲಿಗಳ ಯುದ್ಧವು ಎರಡು ಕ್ರೂರ ಗ್ರಹಗಳಂತೆ ಲೋಕದ ಶಾಂತಿಯನ್ನು ಕಲಕುವುದು. ಇವರಿಬ್ಬರೂ ಈ ಜನ್ಮದಲ್ಲೇ ಮುಕ್ತರಾಗುವಂತಹವರು ಇವರಿಗೆ ಹಾನಿಯಾಗುವುದಿಲ್ಲ. ಆದರೆ ಎರಡೂ ಪಕ್ಷದ ಸೈನಕ್ಕೂ ಹಾನಿಯಾಗುವುದು ಎಂದು ತೀರ್ಮಾನಿಸಿ, ಭರತ ಬಾಹುಬಲಿಯರನ್ನು ಧರ್ಮಯುದ್ಧಕ್ಕೆ ಒಡಂಬಡಿಸಿದರು.

ಈ ಯುದ್ಧವು ನಿಷ್ಕಾರಣವಾದುದು ಹಾಗೂ ಜನರ ಹಾನಿಯಾಗುವುದು ಯುದ್ಧದಿಂದ ಅಧರ್ಮ ಹೆಚ್ಚುವುದು ಯಶಸ್ಸು ಕೆಡುವುದು. ಆದ್ದರಿಂದ ಯುದ್ಧ ಕ್ರಮವನ್ನು ಮಾರ್ಪಡಿಸೋಣ ಎಂದು ಉಭಯಪಕ್ಷದ ಮಂತ್ರಿಗಳೂ ಒತ್ತಾಯ ಪೂರ್ವಕ ಹೇಳಿದ್ದರಿಂದ ಭರತ ಬಾಹುಬಲಿ ಧರ್ಮಯುದ್ಧಕ್ಕೆ ಒಪ್ಪಿಕೊಂಡರು. ಜಲಯುದ್ಧ, ದೃಷ್ಟಿಯುದ್ಧ ಮತ್ತು ಬಾಹುಯುದ್ಧ ನಿಮ್ಮಿಬ್ಬರ ನಡುವೆ ನಡೆಯಲಿ, ಇವುಗಳಲ್ಲಿ ಗೆದ್ದವನು ಜಯಲಕ್ಷ್ಮಿ ವಲ್ಲಭನಾಗಲಿ. ಇದು ಒಂದು ರೀತಿ ಸ್ವಯಂವರವಿದ್ದಂತೆ. ಈ ರೀತಿ ಘೋಷಿಸಿದ ಮೇಲೆ ಆನಂದಭೇರಿಗಳು ಮೊಳಗಿದವು

ಭರತ ಬಾಹುಬಲಿಗಳು ವೃಷ್ಟಿಯುದ್ಧಕ್ಕೆ ಸಿದ್ಧರಾಗಿ ನಿಂತರು. ಇವರುಗಳು ನಿಷಧ ನೀಲ ಪರ್ವತಗಳಂತೆ ಕಂಗೊಳಿಸಿದರು. ಭರತನಿಗಿಂತ ಬಾಹುಬಲಿ 25 ಬಿಲ್ಲು ಎತ್ತರವಿದ್ದರಿಂದ ಬಾಹುಬಲಿಯು ಭರತನನ್ನು ಕೆಳಗಿನ ದೃಷ್ಟಿಯಲ್ಲಿ ನೋಡುತ್ತಿದ್ದನು. ಆದರೆ ಭರತನು ಬಾಹುಬಲಿಯನ್ನು ಮೇಲಕ್ಕೆ ದೃಷ್ಟಿಸಿ ನೋಡುತ್ತಿದ್ದುದರಿಂದ ಬಹಳ ಸಮಯ ನೋಡಲಾಗದೆ ರೆಪ್ಪೆ ಮುಚ್ಚಿದನು. ಹೀಗಾಗಿ ದೃಷ್ಟಿಯುದ್ಧದಲ್ಲಿ ಬಾಹುಬಲಿಗೆ ಜಯವಾಯಿತು. ಅನಂತರ ಜಲಯುದ್ಧದಲ್ಲಿ ಬಾಹುಬಲಿ ಎರಚಿದ ನೀರು ಭರತನ ಮುಖಕ್ಕೂ ಭರತನು ಎರಚಿದ ನೀರು ಬಾಹುಬಲಿ ಎದೆಗೂ ತಟ್ಟುತ್ತಿತ್ತು. ಆದ್ದರಿಂದ ಇದರಲ್ಲೂ ಸಹ ಭರತನು ಸೋತನು. ಬಾಹುಬಲಿ ಗೆದ್ದನು, ನಂತರ ಕೊನೆಯದಾದ ಬಾಹುಯುದ್ಧದಲ್ಲೂ ಸಹ ಬಾಹುಬಲಿಯು ಭರತನನ್ನು ಲೀಲಾಜಾಲವಾಗಿ ಎತ್ತಿ ತಿರುಗಿಸಲ್ಪಟ್ಟಾಗ ಭರತನು ಬೆಂಕಿಕೊಳ್ಳಿಯ ಲೀಲೆಯನ್ನು ಹೊಂದಿದನು. ಭರತೇಶನ ಸೈನಿಕರು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಲೆಬಾಗಿದರು. ಎರಡು ಕಡೆ ರಾಜರುಗಳು ನೋಡುತ್ತಿರಲು ಭರತ ಚಕ್ರಿಯು ಬಹಳ ಅವಮಾನ ಹೊಂದಿ ಕ್ರೋಧಾವಿಷ್ಟನಾಗಿ ಚಕ್ರವನ್ನು ಸ್ಮರಿಸಿದನು. ಚಕ್ರವು ಭರತನನ್ನು ಪ್ರದಕ್ಷಿಣೆ ಮಾಡಿ ಸಮೀಪದಲ್ಲಿ ನಿಂತಿತು. ಆಗ ಮಹಾ ಪುರುಷರಿಂದ ಸಾಕು ಸಾಕು ಕಷ್ಟ ಎಂದು ಧಿಕ್ಕರಿಸಲ್ಪಟ್ಟ ಭರತೇಶನು ಬಹಳ ಪಶ್ಚಾತ್ತಾಪವನ್ನು ಪಟ್ಟನು. ಧೀರನಾದ ಬಾಹುಬಲಿಯು ತನ್ನ ಭುಜಶಿಖರದಿಂದ ಭರತಚಕ್ರಿಯನ್ನು ಮೆಲ್ಲಗೆ ತೂಗುವಂತೆ ಕೆಳಗಿಳಿಸಿದನು.

ಆಗ ರಾಜಶ್ರೇಷ್ಠರೆಲ್ಲಾ ಜಯದ ಹೊಗಳಿಕೆಯೊಡನೆ ಬಾಹುಬಲಿಯನ್ನು ಸತ್ಕರಿಸಿದರು. ಆದರೆ ಬಾಹುಬಲಿಯು ನಾಶವಾಗುವ ಈ ರಾಜ್ಯಕ್ಕಾಗಿ ಅಣ್ಣನು ಎಂತಹ ಹೀನ ಕಾರ್ಯಕ್ಕೆ ಕೈಹಾಕಿದನು. ವಿಷಯಕ್ಕೆ ಮರುಳಾದ ಪ್ರಾಣಿಯು ಅನರ್ಥ ಪರಂಪರೆಯಲ್ಲಿ ಒದ್ದಾಡುವುದು, ವಿಷವು ಕೊಂದರೆ ಒಂದು ಭವವನ್ನು ಕೊಲ್ಲಬಹುದು ಅಥವಾ ಕೊಲ್ಲದೆ ಹೋಗಬಹುದು. ಆದರೆ ವಿಷಯಗಳು ಪ್ರಾಣಿಯನ್ನು ಭವ ಭವದಲ್ಲೂ ಕೊಲ್ಲುವುವು. ವಿಷಯಗಳು ಕಾಂಜೀರವೆಂಬ ಹಣ್ಣಿನ ವಿಷಕ್ಕೆ ಸಮಾನವಾಗಿದೆ. ಪ್ರಾರಂಭದಲ್ಲಿ ಈ ಹಣ್ಣು ರುಚಿಕರವಾಗಿದ್ದರೂ ಕೊನೆಯಲ್ಲಿ ಪ್ರಾಣವನ್ನು ಹಿಂಡುವುದು. ಹೀಗೆ ಭರತೇಶನು ಮೋಹಪೀಡಿತನಾಗಿ ರಾಜ್ಯವನ್ನು ನಿತ್ಯವೆಂದು ಭಾವಿಸಿರುವನು. ಹೀಗೆ ಚಿಂತಿಸಿ ಅಣ್ಣನನ್ನು ಕುರಿತು "ರಾಜಶ್ರೇಷ್ಠನೆ, ನೀನು ಭ್ರಮೆಗೊಂಡು ಈ ದುಸ್ಸಾಹಸಕ್ಕೆ ಕೈಹಾಕಿದೆ, ನಾನು ವಜ್ರಪರ್ವತನಾಗಿರುವೆನು. ನಿನ್ನ ಚಕ್ರ ಒಂದು ತುಂಡು ವಜ್ರವಾಗಿದೆ. ಇದು ನನ್ನನ್ನು ಏನೂ ಮಾಡಲಾರದು. ಆದಿಬ್ರಹ್ಮನ ಜ್ಯೇಷ್ಠ ಪುತ್ರನಾದ ನೀನು ಕುಲೋದ್ಧಾರಕನೆಂಬ ಸ್ತುತಿಗೆ ಪಾತ್ರನಾಗಿರುವೆ, ಸಂಪತ್ತಿಗಾಗಿ ಈ ಹೀನ ಕಾರ್ಯವನ್ನು ಮಾಡಿರುವೆ. ನೀನು ಮೆಚ್ಚಿರುವ ರಾಜಲಕ್ಷ್ಮಿ ನಿನಗೇ ಇರಲಿ, ಇವಳು ನನಗೆ ಯೋಗ್ಯಳಲ್ಲ. ಸತ್ಪುರುಷರು ಪಾಪಬಂಧಕ್ಕೆ ಹೆದರುವರು. ನಾನು ನಿಷ್ಕಂಟಕಳಾದ ತಪೋಲಕ್ಷ್ಮಿಯನ್ನು ಮೆಚ್ಚಿರುವೆನು. ಮುಳ್ಳಿನ ಮಳೆಯಂತಿರುವ ಪೊದರಿನಂತಿರುವ ಈ ರಾಜ್ಯಸಂಪತ್ತನ್ನು ನಾನು ಸಂಪೂರ್ಣವಾಗಿ ತ್ಯಜಿಸಿರುವೆನು, ನನ್ನ ಅಪರಾಧವನ್ನು ಕ್ಷಮಿಸು-ನಾನು ವಿನಯದಿಂದ ಚ್ಯುತನಾದೆನು". ಎಂದು ತನ್ನ ಅಭಿಪ್ರಾಯವನ್ನು ತಿಳಿಸಿದಾಗ !

ಭರತೇಶನಿಗೆ ಸಂತೋಷವಾದರೂ, "ಅಯ್ಯೋ ! ಈ ನಿಂದಕಾರ್ಯವನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾಡಿದೆನಲ್ಲಾ ! ಎಂದು ಪಶ್ಚಾತ್ತಾಪವನ್ನು ಪಟ್ಟನು. ಭರತನ ಈ ದೈನತ್ಯೆಯನ್ನು ಕಂಡು ಬಾಹುಬಲಿಯು ವೈರಾಗ್ಯದಿಂದ ವಿಚಲಿತವಾಗಲಿಲ್ಲ. ಮಹಾ ಪುರುಷರ ಸಂಕಲ್ಪವು ಅಷ್ಟು ದೃಢವಾದುದ. ಬಾಹುಬಲಿಯು ತನ್ನ ಮಗನಾದ ಮಹಾಬಲಿಗೆ ರಾಜ್ಯವನ್ನು ಕೊಟ್ಟು ತಂದೆಯಾದ ಶ್ರೀ ಆದಿಜಿನೇಂದ್ರನ ಸಮವ ಸರಣಕ್ಕೆ ಹೋಗಿ, ವೃಷಭನಾಥನಿಂದ ದೀಕ್ಷೆಗೊಂಡನು. ಬಾಹುಬಲಿ ಮುನಿಯಾದನು. ಗುರುವಾದ ಆದಿಜಿನನ ಆಜ್ಞೆಯನ್ನು ಅನುಸರಿಸಿ ಎಕ ವಿಹಾರಿಯಾಗಿ ಜಿತೇಂದ್ರಿಯನಾದ ಬಾಹುಬಲಿ ಸ್ವಾಮಿಯು ಒಂದು ವರ್ಷದವರೆಗೆ ಪ್ರತಿಮಾ ಯೋಗದಲ್ಲಿದ್ದನು. (ಒಂದು ಸ್ಥಳದಲ್ಲಿ ನಿಂತು ತಪಸ್ಸು ಮಾಡುವುದು). ಈ ಈ ರೀತಿ ಒಂದು ವರ್ಷಕಾಲ ಯೋಗಾರೂಢನಾಗಿರಲು ಬಳ್ಳಿಗಳೂ ಹುತ್ತಗಳೂ ಆವರಿಸಿ, ಪಾದ ಸಮೀಪದಲ್ಲಿ ವಿಷದ ಮೊಳಕೆಯಂತಿರುವುವೂ, ಉಸಿರಾಡುತ್ತಿರುವುವೂ ಹೆಡೆಗಳನ್ನು ಬಿಡಿಸುತ್ತಿರುವೂ ಆದ ಹಾವಿನ ಮರಿಗಳ ಚೇಷ್ಟೆಯಿಂದ ಬಾಹುಬಲಿಸ್ವಾಮಿಯು ಬಹಳವಾಗಿ ಶೋಭಿಸಿದನು.

ಭುಜ ಶಿರಸ್ಸುಗಳವರೆಗೆ ಜೋಲುತ್ತಿರುವ ಕಪ್ಪು ಕೂದಲುಗಳ ಗೊಂಚಲುಗಳನ್ನು ಧರಿಸಿರುವ ಬಾಹುಬಲಿ ಸ್ವಾಮಿಯು ಕೃಷ್ಣ ಸರ್ಪಗಳಿಂದ ಸುತ್ತಲ್ಪಟ್ಟಿರುವ ಚಂದನ ವೃಕ್ಷನಂತೆ ಕಾಣುತ್ತಿದ್ದನು. ಬಾಹುಬಲಿ ಮುನಿಯ ಶರೀರಕ್ಕೆ ಹಬ್ಬಿದ ಮಾಧವಿ ಲತೆಗಳನ್ನು ವಿದ್ಯಾಧರ ಸ್ತ್ರೀಯರು, ಸ್ವಾಮಿಗೆ ತೊಂದರೆಯಾಗದಂತೆ ಮೆಲ್ಲನೆ ಬಿಡಿಸುತ್ತಿದ್ದರು. ಮುಕ್ತಿಗಾಗಿ ಅಭಿಲಾಷೆಯುಳ್ಳವನಾಗಿ ಕಠಿಣವಾದ ತಪಸ್ಸನ್ನು ಮಾಡಿ ಕೃಷವಾಗಿದ್ದ ಬಾಹುಬಲಿ ಸ್ವಾಮಿಯು ಬಹಳವಾಗಿ ಶೋಭಿಸುತ್ತಿದ್ದನು. ತಪಸ್ಸೆಂಬ ಬೆಂಕಿಯಿಂದ ಬಾಹುಬಲಿ ಯೋಗಿಯ ದೇಹ ಕೃಶವಾದಂತೆ, ಕರ್ಮಗಳೂ ಸಹ ನಿರ್ಜರೆಯಾಗುತ್ತಿತ್ತು ಬಾಹುಬಲಿ ಮುನಿಗೆ ಸಂವರೆ ಮತ್ತು ನಿರ್ಜರೆ ಎರಡೂ ಆಗುತ್ತಿತ್ತು. (ಆತ್ಮ ಪ್ರದೇಶಕ್ಕೆ ಬರುವ ಕರ್ಮಗಳನ್ನು ತಡೆಯುವುದು ಸಂವರೆ, ಬಂಧವಾಗಿರುವ ಕರ್ಮಗಳ ನಾಶವಾಗುವುದು ನಿರ್ಜರೆ).

ಸಮಸ್ತ ಪರೀಕ್ಷಹಗಳನ್ನು ಉಪಸರ್ಗಗಳನ್ನು ಸಹಿಸುವವನಾದ ಬಾಹುಬಲಿ ಸ್ವಾಮಿಯು ಭೂಮಿಗಿಂತಲೂ ಮಿಗಿಲಾಗಿ ಕ್ಷಮಾಶೀಲನಾದನು. ಶಾಂತನಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶೀತಲ ಜಲವನ್ನು ಮೀರಿಸಿವನು. ನಿಸ್ಸಂಗನಾಗಿ ಗಾಳಿಯನ್ನು ಮೀರಿಸಿದನು. ತಪೋಜ್ವಾಲೆಯಿಂದ ಬೆಂಕಿಯನ್ನು ಮೀರಿಸಿದನು. ಮೋಡಗಳಿಂದ ಹೊರಬಂದ ಸೂರ್ಯ ಪ್ರಕಾಶಿಸುವ ಹಾಗೆ ಬಾಹುಬಲಿ ಸ್ವಾಮಿಯು ಶ್ರೇಷ್ಠವಾದ ತಪಸ್ಸಿನಿಂದ ಪ್ರಕಾಶಿಸಿದನು. ಈತನ ಸಾನಿಧ್ಯವು ಲೋಕಕ್ಕೆ ಹಿತಕ ವಾಯಿತು. ಈ ಬಾಹುಬಲಿ ಮುನಿಗೆ ಸಮಸ್ತ ಋದ್ಧಿಗಳೂ ಪ್ರಾಪ್ತವಾದವು. ದಶಧರ್ಮ ಗಳನ್ನು ಧರಿಸಿ ಧರ್ಮಧ್ಯಾನ ಮಾಡಿದನು. ದ್ವಾದಶಾನುಪ್ರೇಕ್ಷೆಗಳನ್ನು ಧ್ಯಾನಿಸಿ ದನು. ಬಾಹುಬಲಿ ಮುನಿಯ ಪಾದ ಮೂಲದಲ್ಲಿ ಪ್ರಾಣಿಗಳು ನಿಶ್ಚಿಂತೆಯಾಗಿ ವಿಶ್ರಾಂತಿ ಪಡೆದವು. ಆನೆ ಸಿಂಹಗಳು ತಮ್ಮ ಜಾತಿವೈರ್ಯವನ್ನು ತೊರೆದು ಪರಸ್ಪರ ಮೈತ್ರಿಯಿಂದ ವಿಹರಿಸುತ್ತಾ ಈತನ ತಪೋವೈಭವಕ್ಕೆ ಸಾಕ್ಷಿಯಾದುವು. ಆನೆ ಗಳು ತಾವರೆ ಕಮಲಗಳನ್ನು ತಂದು ಬಾಹುಬಲಿಯ ಪಾದಗಳಲ್ಲಿಟ್ಟು ಭಕ್ತಿ ಯನ್ನು ತೋರಿಸಿದನು. ಕೃಷ್ಣ ಸರ್ಪಗಳು ಬಾಹುಬಲಿ ಮುನಿಯ ಪಾದಗಳ ಇಕ್ಕೆಡೆಗಳಲ್ಲಿದ್ದ ಹುತ್ತಗಳಿಂದ ಮೇಲೆಬಂದು ಹೆಡೆಬಿಚ್ಚಿ ನೀಲೋತ್ಪಲ ಪುಷ್ಪ ಗಳಿಂದ ರಚಿತವಾದ ಅರ್ಘ್ಯಗಳಂತೆ ಶೋಭಿಸದುವು. ಹೀಗೆ ಬಾಹುಬಲಿಯ ಮುನಿ ಸುತ್ತಲೂ ಪ್ರಶಾಂತ ವಾತಾವರಣವಿತ್ತು ಮಹಾತ್ಮರ ಸಂಸರ್ಗದಿಂದ ಕ್ರೂರಾತ್ಮರೂ ಉಪಶಮನಕ್ಕೆ ಒಳಗಾಗುವರು. ಒಟ್ಟಿನಲ್ಲಿ ಆ ವನವು ಅಭಯಾ ರಣ್ಯವಾಗುತ್ತಾ ಈತನ ತಪೋಮಹಿಮೆಯಿಂದ ವನಚರ ಪ್ರಾಣಿಗಳಲ್ಲಿ ಅಹಿಂಸೆ ಪಸರಿಸಿತು. ಆಗ ಬಾಹುಬಲಿ ಸ್ವಾಮಿಗೆ ಮತಿಶ್ರುತ ಅವಧಿ ಮನಃ ಪರ್ಯಾಯ ಗಳೆಂಬ ನಾಲ್ಕುವಿಧ ಜ್ಞಾನದಲ್ಲಿಯೂ ಆಯಾಜ್ಞಾನಕ್ಕೆ ಪ್ರತಿಬಂಧಕಗಳಾದ ಕರ್ಮಗಳ ಕ್ಷಯೋಪಶಮತೆ ಉಂಟಾಯಿತು. ಈ ತಪಃಶಕ್ತಿಯಿಂದ ಮೂರು ಲೋಕದಲ್ಲಿ ಕ್ಷೋಭೆಯುಂಟು ಮಾಡುವ ಶಕ್ತಿ ಆವಿರ್ಭವಿಸಿತು. ಆತ್ಮನನ್ನು ಉದ್ದೇಶಿಸಿ ಪರಿಗ್ರಹ ರಹಿತನೂ ಜಯಶೀಲನೂ ಧ್ಯಾನಸ್ವರೂಪದ ಯೋಗಿಯೂ ಆದ ಬಾಹುಬಲಿ ಸ್ವಾಮಿಯು ಮನಸ್ಸನ್ನು ಧ್ಯಾನದಲ್ಲಿ ಸ್ಥಿರಗೊಳಿಸಿಡನು.

ಈ ಮುನಿಯ ತಪೋಯಾಗದಿಂದುಂಟಾದ ಮಹಾ ತೇಜಸ್ಸಿನಿಂದ ದೇವೇಂದ್ರರ ಆಸನಗಳು ಬಾರಿಬಾರಿಗೆ ಕಂಪಿಸಿದವು. ಆಕಾಶದಲ್ಲಿ ಸಂಚರಿಸುವ ದೇವತೆಗಳು, ವಿದ್ಯಾಧರರು, ತಮ್ಮ ವಿಮಾನಗಳು ಕೀಲಿಸಿದುದರಿಂದ ಬಾಹುಬಲಿ ಮುನಿಯನ್ನು ತಿಳಿದು, ಇಳಿದುಬಂದು ಅನೇಕಾವರ್ತಿ ಸ್ವಾಮಿಯ ಪಾದಗಳನ್ನು ಅನೇಕಾವರ್ತಿ ಪೂಜಿಸಿದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

"ಭರತೇಶನು ನಮ್ಮಿಂದಾಗಿ ಬಹು ಕ್ಲೇಶವುಳ್ಳವನಾದನು" ಎಂಬ ಸ್ನೇಹದಿಂದಾಗಿ ಬಾಹುಬಲಿ ಮುನಿಗೆ ಕೇವಲ ಜ್ಞಾನವಾಗದಿರಲು, ಶ್ರೀ ವೃಷಭಸ್ವಾಮಿಯಲ್ಲಿ ಇದನ್ನು ತಿಳಿದ ಭರತೇಶನು ಬಾಹುಬಲಿ ಮುನಿಯಲ್ಲಿಗೆ ಬಂದು, ವಿಧಿಪ್ರಕಾರವಾಗಿ ಪೂಜಿಸಲು, ಬಾಹುಬಲಿ ಸ್ವಾಮಿಯು ಶ್ರೇಷ್ಠವಾದ ಧ್ಯಾನದ ಬಲದಿಂದ ತಪಸ್ಸಾಮರ್ಥ್ಯವುಳ್ಳವನಾದ ಬಾಹುಬಲಿ ಮುನಿಯು ಪರಿಶುದ್ಧ ಭಾವವನ್ನು ಹೊಂದಿ ಶುಕ್ಲಧ್ಯಾನವೆಂಬ ನಿರ್ವಿಕಲ್ಪ ಸಮಾಧಿಯನ್ನು ಹೊಂದಿ, ಒಂದು ವರ್ಷದ ಕಾಲಾವಧಿಯ ಉಪವಾಸದ ಕೊನೆಯಲ್ಲಿ ನಾಶರಹಿತವಾದ ಕೇವಲ ಜ್ಞಾನವೆಂಬ ಪರಂಜ್ಯೋತಿಯನ್ನು ಪಡೆದನು. (ದೇವತೆಗಳು ಬಂದು ಕೇವಲ ಜ್ಞಾನ ಪೂಜೆಯನ್ನು ಮಾಡಿದರು'. ಪ್ರಸನ್ನ ಬುದ್ಧಿಯುಳ್ಳ ಭರತೇಶ್ವರನು ಕೇವಲ ಜ್ಞಾನವನ್ನು ಪಡೆದ ತನ್ನ ತಮ್ಮನಾದ ಶ್ರೀ ಬಾಹುಬಲಿ ಜಿನನಿಗೆ ಕೇವಲ ಜ್ಞಾನ ಪೂಜೆಯನ್ನು ಮಾಡಿದನು. ಅವನು ಮಾಡಿದ ಪೂಜೆ ವರ್ಣನೆಯನ್ನು ಮಾಡಲು ಯಾರೂಸಮರ್ಥರಿಲ್ಲ. ಒಂದು ಸ್ವಜನಭಾವ, ಎರಡು ಧರ್ಮಪ್ರೀತಿ ಮತ್ತು ಜನ್ಮಾಂತರ ಬಾಂಧವ್ಯ, ಸಂಪೂರ್ಣಪ್ರೇಮ ಬಂಧ, ಇವು ಒಂದೊಂದೂ ಆತ್ಮೀಯವಾದ ಭಕ್ತಿಯನ್ನು ಉಂಟುಮಾಡಿದವು. (ಭರತೇಶ್ವರನು ಮಂತ್ರಿಗಳು ಸಾಮಂತರು, ಅಂತಃಪುರ ಸ್ತ್ರೀಯರು, ಪುರೋಹಿತರು ಇವರೆಲ್ಲ ಒಡಗೊಂಡು ಬಂದು ಬಾಹುಬಲಿ ಸ್ವಾಮಿಗೆ, ರತ್ನಗಳ ಅರ್ಘ್ಯ, ಗಂಗಾಜಲದ ಪಾದ್ಯ, ರತ್ನ ಜ್ಯೋತಿಯ ದೀಪ, ಮುತ್ತಿನ ಪುಂಜ, ಪಾರಿಜಾತಾದಿ ಕಲ್ಪತರುವಿನ ಕುಸುಮಗಳು ಪುಷ್ಪಾರ್ಚನೆ ಅಮೃತಪಿಂಡದಚರು, ಚಂದನದ ಧೂಪ, ಇವುಗಳಿಂದ ರತ್ನಗಳಿಗೆ ಅಧಿಪತಿಯಾದ ಚಕ್ರೇಶನು ಬಾಹುಬಲಿ ಸ್ವಾಮಿಯನ್ನು ಬಹಳ ಭಕ್ತಿಯಿಂದ ಪೂಜಿಸಿ ಪಾದಕಮಲಗಳಿಗೆ ಎರಗಿದನು.

ದೇವೇಂದ್ರಾದಿ ದೇವತೆಗಳು ತಮ್ಮ ಆಸನಗಳ ಕಂಪನದಿಂದ ಬಾಹುಬಲಿ ಸ್ವಾಮಿಗೆ ಕೇವಲ ಜ್ಞಾನೋತ್ಪತ್ತಿಯನ್ನು ತಿಳಿದು ಧಾವಿಸಿಬಂದು ಬಹಳ ವಿಜೃಂಭಣೆಯಿಂದ ಪೂಜಿಸಿದರು. ಸ್ವರ್ಗದ ಉದ್ಯಾನದ ಕಲ್ಪವೃಕ್ಷಗಳನ್ನು ಅಲುಗಾಡಿಸಿ ಗಂಗಾನಂದಿಯಿಂದ ಕಂಪಿನ ಜಲಕಣಗಳನ್ನು ಬಾಚಿಕೊಂಡು ನಿಧಾನವಾಗಿ ಸುವಾಸನಯುಕ್ತವಾದ ಗಾಳಿ ಬೀಸಿತು. ದೇವದುಂಧುಭಿಗಳು ಮೊಳಗಿದವು, ದೇವಪುಷ್ಪದ ಮಳೆಗರೆಯಿತು. ದೇವಶಿಲ್ಪಿಗಳು ಬಾಹುಬಲಿ ಸ್ವಾಮಿಯನ್ನು ಸತ್ಕರಿಸಲು ರತ್ನಮಯವಾದ ಛತ್ರಿಯನ್ನು ರತ್ನಖಚಿತವಾದ ದಿವ್ಯಪೀಠವನ್ನು ಸಿದ್ಧಪಡಿಸಿದರು. ಸ್ವಾಮಿಯ ಎರಡೂ ಕಡೆಗಳಲ್ಲಿ ದೇವೇಂದ್ರರು ಚಾಮರಬೀಸಿದರು. ಸುಗಂಧಭರಿತವಾದ ಗಂಧಕುಟಿಯು ಸ್ವಾಮಿಗೋಸುಗ ರಚಿತಗೊಂಡಿತು. ದೇವೇಂದ್ರ ಪೂಜೆ, ಕೇವಲ ಜ್ಞಾನಲಕ್ಷ್ಮಿ, ಮುನೀಂದ್ರ ಪೂಜೆ ಇವುಗಳಿಂದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಕ್ಷತ್ರಗಳ ಸಮೂಹದಲ್ಲಿ ಶೋಭಿಸುವ ಚಂದ್ರನಂತೆ ಬಾಹುಬಲಿ ಸ್ವಾಮಿಯು ರಾರಾಜಿಸಿದನು. ಆತ್ಮಸ್ವಭಾವವನ್ನು ಮರೆಮಾಡುವ ಘಾತಿಕರ್ಮಗಳನ್ನು ಧ್ವಂಸ ಮಾಡಿ ಬಾಹುಬಲಿ, ಜಿನೇಂದ್ರನಾಗಿ ಎಲ್ಲರಿಗೂ ಪೂಜ್ಯನಾಗಿ, ಸಮಸ್ತ ಭೂಮಿ ಯಲ್ಲೂ ವಿಹರಿಸಿ ಲೋಕಪೂಜ್ಯನಾದನು. ಬಾಹುಬಲಿ ಸ್ವಾಮಿಯು ವಚನಾಮೃತ ವನ್ನು ಕರೆದು ಲೋಕವನ್ನು ಸಂತುಷ್ಟಗೊಳಿಸಿ, ಕೊನೆಗೆ ಶ್ರೀ ವೃಷಭದೇವನಿಂದ ಪಾವನಗೊಂಡ ಕೈಲಾಸಪರ್ವತದಲ್ಲಿ ತಂಗಿದನು ತದ್ಭವಮೋಕ್ಷಗಾಮಿಗಳಲ್ಲಿ ಮೊದಲನೆಯವನಾದ ಬಾಹುಬಲಿ ಸ್ವಾಮಿಯು ನಮ್ಮೆಲ್ಲರನ್ನೂ ಕಾಪಾಡಲಿ ಷಡ್‌ಖಂಡವನ್ನು ಗೆದ್ದ ವಿಜಯಲಕ್ಷ್ಮಿಯನ್ನು ತಿರಸ್ಕರಿಸಿ ಶ್ರೀ ವೃಷಭಸ್ವಾಮಿಯ ಮಾರ್ಗವನ್ನು ಅನುಸರಿಸಿದ ಬಾಹುಬಲಿಯು ನಮ್ಮೆಲ್ಲರನ್ನೂ ಕಾಪಾಡಲಿ ಆದಿಬ್ರಹ್ಮನ ಪುತ್ರನಾದ ಬಾಹುಬಲಿಯು ಘೋರ ತಪಸ್ಸಿನಿಂದ ಕರ್ಮಗಳನ್ನು ಜಯಿಸಿ, ಜಿನೇಂದ್ರನಾದನು. ವೀತರಾಗಿಯಾದನು. ಇಂತಹ ಸ್ವಾಮಿಗೆ ಜಯ ವಾಗಲಿ, ಕ್ಷತ್ರಿಯ ಸಮಾಜದೆದಿರು ಭರತಚಕ್ರಿಯನ್ನು ಸೋಲಿಸಿ ಯಶೋ ವಂತನಾದಂತಹ, ಹಾಗೂ ಸ್ವಾಮಿಯ ನಾಮ ಸಂಕೀರ್ತನದಿಂದ ಸಮಸ್ತ ಜೀವ ಕೋಟಿ ಪವಿತ್ರವಾಗುವಂತಹ ಬಾಹುಬಲಿ ಸ್ವಾಮಿಗೆ ಜಯವಾಗಲಿ. ಬಾಹುಬಲಿಯ ಉಗುರಿನ ಕಾಂತಿಯಲ್ಲಿ ಭರತ ಚಕ್ರಿಯ ರತ್ನರಂಜಿತ ಕಿರೀಟ ಕಾಂತಿ ಸ್ನಾನಮಾಡಿತು ಮತ್ತು ಆದಿಬ್ರಹ್ಮನ ಪುತ್ರನೂ ಮಹಾಧೈರ್ಯಶಾಲಿಯೂ. ಮಹಾನ್ ಯೋಗಿಯೂ ಆದ ಬಾಹುಬಲಿ ಜಿನನಿಗೆ ಜಯವಾಗಲಿ. ವರ್ಷಕಾಲ ದಲ್ಲಿ ಮೇಘಗಳು ಈ ಸ್ವಾಮಿಗೆ ಮಹಾಮಸ್ತಕಾಭಿಷೇಕವನ್ನು ಮಾಡಿದವು. ಬೇಸಿಗೆಯಲ್ಲಿ ಬಿಸಿಲಿನ ತಾಪದಲ್ಲಿ ನಿಶ್ಚಿಂತನಾಗಿದ್ದ ಬಾಹುಬಲಿಗೆ ಜಯವಾಗಲಿ ಮಹಾನ್. ತ್ಯಾಗಮೂರ್ತಿಯಾದ, ಅಹಿಂಸಾಮೂರ್ತಿಯಾದ ಬಾಹುಬಲಿ ಜಿನ ನನ್ನು ಯೋಗಿಗಳು ಆರಾಧಿಸಿದರು. ಮಾನ್ಯರಾದ ಮಹಾಪುರುಷರು ಪೂಜಿಸಿ ದರು. ಎಲ್ಲದರಲ್ಲೂ ಜಯಶೀಲನಾದಂತಹ ಈ ಬಾಹುಬಲಿ ಸ್ವಾಮಿಯನ್ನು ತಮ್ಮ ಹೃದಯ ಕಮಲದಲ್ಲಿ ಆವಾಹನೆ ಮಾಡುವರೋ, ಭಕ್ತಿಯಿಂದ ಪೂಜಿಸು ವರೋ, ಭಕ್ತಿಯಿಂದ ಭಜಿಸುವರೋ ಆ ಭವ್ಯ ಜೀವಿಗಳು ಬಹುಬೇಗ ಮೋಕ್ಷ ಲಕ್ಷ್ಮಿಯನ್ನು ಹೊಂದುವರು. ಆತ್ಮಸಿದ್ಧಿಯನ್ನು ಪಡೆಯುವರು. ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವರು. ಮೂರು ಲೋಕದ ತುದಿಯಲ್ಲಿರುವ ಧವಳ ಛತ್ರಾಕಾರದ ಸಿದ್ಧಶಿಲೆಯಲ್ಲಿ ಸಿದ್ಧರಾಗಿ ವಿರಾಜಮಾನರಾಗುವರು.

ಭದ್ರಂ ಶುಭಂ-ಮಂಗಳಂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

—: ಸುಲಭ ಮೋಕ್ಷೋಪಾಯ :—

ಪ್ರತಿಯೊಬ್ಬ ಗೃಹಸ್ಥರು ತಮ್ಮ ಊಟ ಮಾಡುವ ಮೊದಲು ನಮಃಶ್ರೀ ವರ್ಧಮಾನಾಯ ಶ್ಲೋಕಗಳನ್ನು ಉಚ್ಚರಿಸಿ ಮೂರು ಸಂಖ್ಯೆ ಕಡಿಮೆಯಾದ ನವಕೋಟಿ ಮುನೀಶ್ವರರನ್ನು ಭಾವದಿಂದ ಆಹ್ವಾನಿಸಿ ಅರ್ಘ್ಯವನ್ನು ಕೊಟ್ಟು ಮನ ವಚನ ಕಾಯ ಶುದ್ಧಿಯಿದೆ, ಆಹಾರ ಶುದ್ಧಿ ಇದೆ ಎಂದು ಉಚ್ಚರಿಸಿ ಆಹಾರವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಈ ಉತ್ತಮ ಭಾವನೆಯಿಂದ ಮೂರು ಪಲ್ಯೋಪಮಕಾಲ ಭೋಗಭೂಮಿಯಲ್ಲಿದ್ದು ಉಳಿದ ಪುಣ್ಯಕ್ಕೆ ಸ್ವರ್ಗದಲ್ಲಿ ಹುಟ್ಟಿ ಮಧ್ಯಮ ಲೋಕದಲ್ಲಿರುವ ನೂರೆಪ್ಪ ಕರ್ಮಭೂಮಿಗಳಲ್ಲಿ ಉತ್ತಮ ಕುಲದಲ್ಲಿ ಹುಟ್ಟಿ ಕರ್ಮಕ್ಷಯ ಮಾಡಿ ಮೋಕ್ಷವನ್ನು ಪಡೆಯಬಹುದು ಇದಕ್ಕಿಂತ ಸುಲಭವಾದ ಮಾರ್ಗ ಮತ್ತೊಂದಿಲ್ಲ. ಇದಕ್ಕೆ ಉದಾಹರಣೆ ಶ್ರೀಮತಿ ಶ್ರೀಯಾಂಸ ವಜ್ರಜಂಘರು ಕ್ರಮವಾಗಿ ಕರ್ಮಕ್ಷಯ ಮಾಡಿ ಮುಕ್ತಿಯನ್ನು ಪಡೆದರು.

ಓದುಗರಲ್ಲಿ ವಿನಂತಿ :—

14ನೇ ಪುಟದ 3ನೇ ಸಾಲಿನಲ್ಲಿ (ಚಕ್ರವು ಭರತನನ್ನು ಪ್ರದಕ್ಷಿಣೆ ಮಾಡಿ ಆದನಂತರ ಬಾಹುಬಲಿಯು ಬಳಿಗೆ ಬಂದು ಬಾಹುಬಲಿಯನ್ನೂ ಪ್ರದಕ್ಷಿಣೆ ಮಾಡಿ ಸಮೀಪದಲ್ಲಿ ನಿಂತಿತು.) ಎಂದು ಓದಿಕೊಳ್ಳುವುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸ್ಥಾಪನೆ : 1980 ಚಂದ್ರಪ್ರಭ ಟ್ರಸ್ಟ್
ಸ್ಥಾಪಕರು ಎಂ. ಸಿ. ಪದ್ಮನಾಭಶರ್ಮ
ಮೈಸೂರು.

ಜಿನವಾಣಿ ಗ್ರಂಥ ಮಾಲೆಯ ಸಂಪಾದಕರು
ಎಂ. ಪಿ. ರಾಜೇಂದ್ರಕುಮಾರ್

ಪ್ರಕಟಣೆ

ಚಂದ್ರಪ್ರಭ ಟ್ರಸ್ಟ್‌ಗೆ ಮಹಾಪೋಷಕರು, ಪೋಷಕರು, ಸಾಮಾನ್ಯ ಸದಸ್ಯರುಗಳು ಈ ಕೆಳಗಿನ ನಿಯಮದಂತೆ ಸಹಕರಿಸುವವರಿಗೆ ಜಿನವಾಣಿ ಗ್ರಂಥಮಾಲೆಯ ಪುಸ್ತಕಗಳನ್ನು ಉದಾರವಾಗಿ ಕೊಡಲಾಗುತ್ತದೆ. ಹೆಚ್ಚು ಜನರು ಸಹಕಾರ ನೀಡಿದರೆ ಉತ್ತಮ ಗ್ರಂಥಗಳನ್ನು ಪ್ರಕಟಿಸಲು ಸಾಧ್ಯವಾಗುತ್ತದೆ.

1. ಮಹಾಪೋಷಕರಿಗೆ 1001 ರೂಪಾಯಿಗಳು.
2. ಪೋಷಕರಿಗೆ 501 ರೂಪಾಯಿಗಳು.
3. ಸಾಮಾನ್ಯ ಸದಸ್ಯರುಗಳಿಗೆ 251 ರೂಪಾಯಿಗಳು.

ಚಂದ್ರಪ್ರಭ ಟ್ರಸ್ಟ್
67, ಬಸವಯ್ಯ ರೋಡ್,
ಮೈಸೂರು–570 024.

ಮುದ್ರಕರು : ಮಂಜುನಾಥ ಪ್ರಿಂಟರ್ಸ್, ಮೈಸೂರು. ☏ : 31468

CC-0. Bhagavad Ramanuja National Research Institute, Melukote Collection.